
ಕರ್ನಾಟಕ
ನಗರ ಆಡಳಿತದ
ದುಂಡುಮೇಜಿನ ಸಭೆ

ಜನಾಗ್ರಹ

# ಕರ್ನಾಟಕದ ನಗರಗಳಲ್ಲಿ ವಿಕೇಂದ್ರೀಕೃತ ಸಹಭಾಗಿತ್ವದ ಆಡಳಿತದ ವಿಶ್ಲೇಷಣಾತ್ಮಕ ವಿಮರ್ಶೆ



JANAAGRAHA

ಜನಾಗ್ರಹವು ಬೆಂಗಳೂರು ಮೂಲದ ಲಾಭರಹಿತ ಸಂಸ್ಥೆಯಾಗಿದ್ದು, ಭಾರತದ ನಗರಗಳು ಮತ್ತು ಪಟ್ಟಣಗಳಲ್ಲಿ ನಾಗರಿಕರ ಜೀವನ ಗುಣಮಟ್ಟದಲ್ಲಿ ಸುಧಾರಣೆಯನ್ನು ತರುವುದು ಇದರ ಆಶಯವಾಗಿದೆ. ಮೂಲಸೌಕರ್ಯ, ಸೇವೆಗಳು ಮತ್ತು ಪೌರತ್ವದ ಸುಧಾರಣೆಯಿಂದ ನಗರದ ಜೀವನದ ಗುಣಮಟ್ಟದಲ್ಲಿ ನೇರವಾಗಿ ಬದಲಾವಣೆಯನ್ನು ತರಬಹುದು ಎಂಬುದು ಜನಾಗ್ರಹದ ಧೃಡ ನಂಬಿಕೆ ಮತ್ತು ನಗರದ ಮೂಲಸೌಕರ್ಯಗಳನ್ನು ಸಧೃಡಗೊಳಿಸುವ ಮೂಲಕ ನಗರ ವ್ಯವಸ್ಥೆಯನ್ನು ಸುಧಾರಿಸುವುದು ಜನಾಗ್ರಹ ಸಂಸ್ಥೆಯ ಆಶಯ. ಅದಕ್ಕಾಗಿಯೇ, ತನ್ನ ಧ್ಯೇಯವನ್ನು ಸಾಧಿಸಲು, ಜನಾಗ್ರಹವು ನಗರದ  ನೆರೆಹೊರೆಗಳಲ್ಲಿ ಸಕ್ರಿಯ ಪೌರತ್ವವನ್ನು ವೇಗಗೊಳಿಸಲು ಕೌನ್ಸಿಲರ್‌ಗಳು ಮತ್ತು ನಾಗರಿಕರೊಂದಿಗೆ ಹಾಗೆಯೇ ನಗರ-ವ್ಯವಸ್ಥೆಗಳಿಗೆ ಸುಧಾರಣೆಗಳನ್ನು ಸ್ಥಾಪಿಸಲು ಸರ್ಕಾರಗಳ ಜೊತೆಗೆ ಕಾರ್ಯನಿರ್ವಹಿಸುತ್ತಿದೆ. ಜನಾಗ್ರಹವು ನಗರ ನೆರೆಹೊರೆಗಳಲ್ಲಿ ಸಕ್ರಿಯ ಪೌರತ್ವವನ್ನು ವೇಗಗೊಳಿಸಲು ಕೌನ್ಸಿಲರ್‌ಗಳು ಮತ್ತು ನಾಗರಿಕರೊಂದಿಗೆ ಮತ್ತು ನಗರ-ವ್ಯವಸ್ಥೆಗಳಿಗೆ ಸುಧಾರಣೆಗಳನ್ನು ಸ್ಥಾಪಿಸಲು ಸರ್ಕಾರಗಳೊಂದಿಗೆ ಕೆಲಸ ಮಾಡುತ್ತದೆ. JnNURM ಯೋಜನೆ ಸೇರಿದಂತೆ ಎರಡು ದಶಕಗಳಿಂದ ನಗರ ನೀತಿ ಮತ್ತು ಆಡಳಿತ ಸುಧಾರಣೆಗಳಲ್ಲಿ ಜನಾಗ್ರಹ ವ್ಯಾಪಕವಾಗಿ ಕೆಲಸ ಮಾಡಿದೆ, ಮತ್ತು XIII, XIV ಮತ್ತು XV ಹಣಕಾಸು ಆಯೋಗಗಳು, ಎರಡನೇ ಆಡಳಿತ ಸುಧಾರಣಾ ಆಯೋಗ, ಮುಖ್ಯ ಲೆಕ್ಕ ಪರಿಶೋಧಕರು ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ, ನೀತಿ ಆಯೋಗ / ಯೋಜನಾ ಆಯೋಗ, ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ (MoHUA) ಮತ್ತು ಒಡಿಶಾ, ಉತ್ತರ ಪ್ರದೇಶ, ತಮಿಳುನಾಡು, ರಾಜಸ್ಥಾನ ಮತ್ತು ಅಸ್ಸಾಂ ರಾಜ್ಯ ಸರ್ಕಾರಗಳ ಜೊತೆಗೆ ಕಾರ್ಯನಿರ್ವಹಿಸುತ್ತಿದೆ.

ಇನ್ನಷ್ಟು ಮಾಹಿತಿಗಳನ್ನು ಪಡೆಯಲು ಈ ವೆಬ್ಸೈಟ್ ಭೇಟಿ ನೀಡಿ www.janaagraha.org

ಬೆಂಗಳೂರು | 31 ಆಗಸ್ಟ್ 2024

## ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**ಸಂತೋಷ ನರಗುಂದ**
ಮುಖ್ಯಸ್ಥರು - ಸಹಭಾಗಿತ್ವ ಆಡಳಿತದ
ಇಮೇಲ್: santosh.nargund@janaagraha.org
ದೂರವಾಣಿ: +91 99161 35836

**ಮಂಜುನಾಥ ಹಂಪಾಪುರ ಎಲ್**
ಕಾರ್ಯಕ್ರಮ ನಿರ್ವಾಹಕ - ನಾಗರಿಕ ಭಾಗವಹಿಸುವಿಕೆ (ಕರ್ನಾಟಕ)
ಇಮೇಲ್: manjunatha@janaagraha.org
ದೂರವಾಣಿ: +91 98447  73584

# ಪರಿವಿಡಿ


ಪರಿಚಯ ........ 04

ಕರ್ನಾಟಕದಲ್ಲಿ ವಿಕೇಂದ್ರೀಕೃತ ಸಹಭಾಗಿತ್ವ ಆಡಳಿತವನ್ನು ಬಲಪಡಿಸುವ ಕುರಿತು ಶಿಫಾರಸುಗಳು ........ 09

ನಗರ ಸ್ಥಳೀಯ ಸರ್ಕಾರಗಳಿಗೆ ಅಧಿಕಾರ ವಿಕೇಂದ್ರೀಕರಣ ........ 12

ನಗರ ಸ್ಥಳೀಯ ಸರ್ಕಾರಗಳಲ್ಲಿ ಚುನಾವಣೆಗಳು........ 17

ವಾರ್ಡ್ ಸಮಿತಿಗಳು ಮತ್ತು ಏರಿಯಾ ಸಭಾಗಳ ಮೂಲಕ ಸಾಂಸ್ಥಿಕವಾದ ನಾಗರಿಕ ಭಾಗವಹಿಸುವಿಕೆ........ 21

ಕರ್ನಾಟಕ ವಾರ್ಡ್ ಸಮಿತಿ ಬಳಗದ ರಚನೆ, ಕಾರ್ಯ ಮತ್ತು ನಗರಗಳಲ್ಲಿ ವಾರ್ಡ್ ಸಮಿತಿಗಳನ್ನು ಸ್ಥಾಪಿಸಲು, ಬಲಪಡಿಸುವಲ್ಲಿ ಬಳಗದ ಪ್ರಯತ್ನಗಳು ........ 31

ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳಿಗೆ ಸಂಬಂಧಿಸಿದಂತೆ ಚುನಾಯಿತ ಪ್ರತಿನಿಧಿಗಳ ಶಿಫಾರಸ್ಸುಗಳು ........ 36

# ಪರಿಚಯ



सत्यमेव जयते

## ಶ್ರೀ ಹರ್ದೀಪ್ ಎಸ್ ಪುರಿ

ಮಾಜಿ ವಸತಿ ಮತ್ತು ನಗರ ವ್ಯವಹಾರಗಳ ಸಚಿವರು, ಭಾರತ ಸರ್ಕಾರ

“ ವಾರ್ಡ್ ಸಮಿತಿಗಳು ಮತ್ತು ಏರಿಯಾ ಸಭಾಗಳು ಸ್ವರಾಜ್ಯದ ನಿಜವಾದ ಸಾಕಾರ ರೂಪಗಳಾಗಿವೆ. ಅವುಗಳು, ನಾಗರಿಕ, ಪೌರ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳ ನಡುವೆ ರಚನಾತ್ಮಕ ತಂಡದ ಕೆಲಸವನ್ನು ಉದಾಹರಿಸುವ ಮೂಲಕ ಸಾಮಾನ್ಯವಾಗಿ ಅತಿಯಾಗಿ ಬಳಕೆಯಾಗುವ, ಆದರೆ ಅಪರೂಪವಾಗಿ ಅರ್ಥೈಸಿಕೊಳ್ಳಲಾಗುವ 'ಸಮುದಾಯ' ದ ಆದರ್ಶವನ್ನು ಪ್ರತಿನಿಧಿಸಲು ಉದ್ದೇಶಿತವಾಗಿದೆ. ಈ ಸಂಸ್ಥೆಗಳನ್ನು ಸ್ಥಳೀಯ ಆಡಳಿತದ ಪರಿಣಾಮಕಾರಿ ಸಾಧನಗಳಾಗಿ ರೂಪಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.“



GOVERNMENT OF KARNATAKA


## ಶ್ರೀ ಸಿದ್ದರಾಮಯ್ಯ

ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

“ ತೆರಿಗೆ ಪಾವತಿಸುವ ನಾಗರಿಕರು, ಸರ್ಕಾರದ ನೀತಿ ನಿರೂಪಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಜೊತೆಗೆ ಸರ್ಕಾರದ ಕಾರ್ಯವೈಖರಿಯ ಮೇಲ್ವಿಚಾರಣೆಯನ್ನೂ ಕೈಗೊಳ್ಳಬೇಕು. ಗುಣಮಟ್ಟದ ಅಭಿವೃದ್ಧಿ, ಸಾಧಿಸಲು ನೀತಿ ನಿರೂಪಣೆ ಹಾಗು ಸರ್ಕಾರದ ಹೊಣೆಗಾರಿಕೆ ಮತ್ತು ಜವಾಬ್ದಾರಿಯ ಬಗ್ಗೆ ನಿಗಾ ವಹಿಸಲು ನಾಗರಿಕರು ಮತ್ತು ಸರ್ಕಾರಗಳ ನಡುವೆ ಸಂವಹನ ಅತ್ಯವಶ್ಯ”

# ಕರ್ನಾಟಕದ ನಗರೀಕರಣದ ಚಿತ್ರ

### ಕರ್‌ನಾಟಕದ ನಗರಗಳ ಜನಸಂಖ್ಯೆ




### ಆಡಳಿತದ ಚೌಕಟ್ಟು:



**ಬೆಂಗಳೂರು**
ಬೃಹತ್ ಬೆಂಗಳೂರು ಮಹಾನಗರ
ಪಾಲಿಕೆ ಕಾಯ್ದೆ, 2020



**ಮಹಾನಗರ ಪಾಲಿಕೆಗಳು**
ಕರ್ನಾಟಕ ಮಹಾನಗರ
ಪಾಲಿಕೆಗಳ ಕಾಯ್ದೆ, 1976




**ಪುರಸಭೆಗಳು, ನಗರಸಭೆಗಳು, ಮತ್ತು ಪಟ್ಟಣ ಪಂಚಾಯತಿಗಳು**
ಕರ್ನಾಟಕ ಪೌರ ಸಂಸ್ಥೆಗಳ ಕಾಯ್ದೆ, 1964

ಮೂಲ: ಜನಗಣತಿ 1991, ಜನಗಣತಿ 2011, ಜನಸಂಖ್ಯೆಯ ಪ್ರಕ್ಷೇಪಗಳ ತಾಂತ್ರಿಕ ಗುಂಪಿನ ವರದಿ, 2019


# ಕರ್ನಾಟಕದ ನಗರೀಕರಣದ ಚಿತ್ರ

**315**




ನಗರ ಸ್ಥಳೀಯ ಸಂಸ್ಥೆಗಳು

2011 ರಲ್ಲಿ 219 ನಗರ ಸ್ಥಳೀಯ ಸಂಸ್ಥೆಗಳಿದ್ದು ಅವು 2024 ರಲ್ಲಿ 315 ನಗರ ಸ್ಥಳೀಯ ಸಂಸ್ಥೆಗಳಾಗಿವೆ, ಅಂದರೆ ಶೇ. **44** ರಷ್ಟು ಹೆಚ್ಚಳವಾಗಿದೆ





ಕರ್ನಾಟಕದ ಜನಸಂಖ್ಯೆಯ **ಶೇ. 39** ರಷ್ಟು ಭಾಗ ನಗರಗಳಲ್ಲಿ ವಾಸಿಸುತ್ತದೆ

ಕರ್ನಾಟಕದ ಜನಸಂಖ್ಯೆಯ **ಶೇ. 39** ರಷ್ಟು ಭಾಗ ನಗರಗಳಲ್ಲಿ ವಾಸಿಸುತ್ತದೆ



## ವೇಗವಾಗಿ ನಗರೀಕರಣಗೊಳ್ಳುತ್ತಿರುವ ಜಿಲ್ಲೆಗಳು




ಮೂಲ: ನಗರ ಸರ್ಕಾರಗಳ ಜನಸಂಖ್ಯೆ: http://www.municipaladmn.gov.in/en/about-dma

# ಕರ್ನಾಟಕದ ನಗರ ಸ್ಥಳೀಯ ಆಡಳಿತ ಎದುರಿಸುತ್ತಿರುವ ಪ್ರಮುಖ ಸವಾಲುಗಳು




ಕರ್ನಾಟಕದಲ್ಲಿ 11 ನಗರ ನಿಗಮಗಳಲ್ಲಿ ಕೇವಲ 1 ರಲ್ಲಿ ಮಾತ್ರ ವಾರ್ಡ್ ಸಮಿತಿಗಳಿವೆ ರಾಜ್ಯದಲ್ಲಿ ವಾರ್ಡ್ ಸಮಿತಿಗಳು ಮತ್ತು ಪ್ರದೇಶ ಸಭೆಗಳನ್ನು ರಚಿಸಲಾಗಿಲ್ಲ ಅಥವಾ ಕಾರ್ಯನಿರ್ವಹಿಸುತ್ತಿಲ್ಲ .



ನಗರ ನಿಗಮಗಳ ಚುನಾವಣೆಗಳಲ್ಲಿ ಸರಾಸರಿ 22 ತಿಂಗಳ ವಿಳಂಬವಾಗುತ್ತದೆ ಐದು ವರ್ಷಗಳ ಅವಧಿ ಮುಗಿಯುವ ಮೊದಲು ಮುನ್ಸಿಪಲ್ ಚುನಾವಣೆಗಳನ್ನು ಸಮಯೋಚಿತವಾಗಿ ನಡೆಸಲಾಗುತ್ತಿಲ್ಲ .



ಸಾಮಾನ್ಯ ಚುನಾವಣೆಗಳ ನಂತರ ನಗರ ನಿಗಮಗಳ ಮೇಯರ್‌ಗಳ ಚುನಾವಣೆಯಲ್ಲಿ ಸರಾಸರಿ 11 ತಿಂಗಳ ವಿಳಂಬವಾಗುತ್ತದೆ.



ಸಂವಿಧಾನದಿಂದ ನಿರ್ದೇಶಿಸಲ್ಪಟ್ಟ ಸ್ಥಳೀಯ ಆಡಳಿತದ 18 ಕಾರ್ಯಗಳಲ್ಲಿ 15 ರ ಮೇಲೆ ನಗರ ಸರ್ಕಾರಗಳಿಗೆ ಯಾವುದೇ ಪಾತ್ರ ಅಥವಾ ನಿಯಂತ್ರಣವಿಲ್ಲ.



ನಾಗರಿಕರಿಗೆ ಮಂಡಳಿ ಚರ್ಚೆಗಳು ಮತ್ತು ನಡವಳಿಕೆಗಳು, ಅಭಿವೃದ್ಧಿ ಯೋಜನೆಗಳು, ಅಥವಾ ಸ್ಥಳೀಯ ಆಡಳಿತದ ಇತರ ಪ್ರಮುಖ ಮಾಹಿತಿಗೆ ಸಾರ್ವಜನಿಕ ಪ್ರವೇಶವಿಲ್ಲ.



# ಕರ್ನಾಟಕದಲ್ಲಿ ವಿಕೇಂದ್ರೀಕೃತ ಸಹಭಾಗಿತ್ವ ಆಡಳಿತವನ್ನು ಬಲಪಡಿಸುವ ಕುರಿತು ಶಿಫಾರಸುಗಳು

# ಪರಿಣಾಮಕಾರಿ ಅಧಿಕಾರ ವಿಕೇಂದ್ರೀಕರಣ ಮತ್ತು ಸಕಾಲದಲ್ಲಿ ಚುನಾವಣೆ ನಡೆಸುವುದು

| | |
|---|---|
| 1 | ನಗರ ಸರ್ಕಾರಗಳಿಗೆ ಅಗತ್ಯವಿರುವ ಎಲ್ಲಾ ಅಧಿಕಾರಗಳನ್ನು / ಕಾರ್ಯಗಳನ್ನು ಪರಿಣಾಮಕಾರಿಯಾಗಿ ಹಸ್ತಾಂತರಿಸುವುದು ಮತ್ತು ಈ ಕಾರ್ಯಗಳನ್ನು ತೃಪ್ತಿಕರವಾಗಿ ಅನುಷ್ಠಾನಗೊಳಿಸಲು ನಗರ ಸರ್ಕಾರಗಳಿಗೆ ಅಗತ್ಯವಿದ್ದಷ್ಟು ಸಿಬ್ಬಂದಿ ಮತ್ತು ಸಂಪನ್ಮೂಲಗಳನ್ನು ಒದಗಿಸುವುದು |
| 2 | ಐದು ವರ್ಷಕೊಮ್ಮೆ ಪೌರ ಸಂಸ್ಥೆಗಳ ಪರಿಷತ್ತಿನ ಅವಧಿ ಮುಗಿಯುವ ಮುನ್ನ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಸಕಾಲದಲ್ಲಿ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದು |
| 3 | ಪೌರ ಸಂಸ್ಥೆಗಳ ಚುನಾವಣೆಯ ಫಲಿತಾಂಶಗಳು ಪ್ರಕಟವಾದ 15 ದಿನಗಳಲ್ಲಿ ಮೇಯರ್/ಅಧ್ಯಕ್ಷರ ಚುನಾವಣೆಗಳನ್ನು ನಡೆಸುವುದರ ಮುಖೇನ ನಗರ ಸ್ಥಳೀಯ ಸಂಸ್ಥೆಗಳ ಪರಿಷತ್ತುಗಳನ್ನು ರಚಿಸುವುದು |
| 4 | ವಾರ್ಡ್‌ಗಳ ಪುನರ್ ರಚನೆ ಮತ್ತು ಮೀಸಲಾತಿ ನಿಗದಿ ಪಡಿಸುವ ಜವಾಬ್ದಾರಿಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಒಪ್ಪಿಸುವುದು |

# ಸುಧಾರಿತ ಮತ್ತು ಸಕ್ರಿಯ ನಾಗರಿಕ ಭಾಗವಹಿಸುವಿಕೆ

| | |
|---|---|
| 1 | ಏರಿಯಾ ಸಭಾಗಳನ್ನು ತಕ್ಷಣವೇ ರಚಿಸಲು ಅಧಿಸೂಚನೆ ಹೊರಡಿಸುವುದು ಹಾಗು ಅವುಗಳನ್ನು ಕಾರ್ಯಗತಗೊಳಿಸುವುದು |
| 2 | ಏರಿಯಾ ಸಭಾಗಳನ್ನು ರಚನೆ ಮಾಡಿ ಅಧಿಸೂಚನೆ ಹೊರಡಿಸುವ ಸಂಪೂರ್ಣ ಅಧಿಕಾರ ನಗರ ಸರ್ಕಾರಗಳಿಗೆ ನೀಡುವುದು |
| 3 | ಪೌರ ಸಂಸ್ಥೆಗಳ ಚುನಾವಣಾ ಫಲಿತಾಂಶ ಪ್ರಕಟವಾದ ಒಂದು ತಿಂಗಳೊಳಗೆ ವಾರ್ಡ್ ಸಮಿತಿಗಳನ್ನು ರಚಿಸುವುದು |
| 4 | ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳ ಸದಸ್ಯರಾಗಲು ಮತ್ತು ಸಕ್ರಿಯವಾಗಿ ಭಾಗವಹಿಸಲು ನಾಗರಿಕರನ್ನು ಆಹ್ವಾನಿಸಿ ವ್ಯಾಪಕ ಪ್ರಚಾರ ಮತ್ತು ಜಾಗೃತಿ ಮೂಡಿಸುವಂತೆ ನಗರ ಸರ್ಕಾರಗಳಿಗೆ ನಿರ್ದೇಶನ ನೀಡುವುದು |
| 5 | ಅಭಿವೃದ್ಧಿ ನಿಧಿಗಳನ್ನು, ಅಭಿವೃದ್ಧಿ ಯೋಜನೆಗಳನ್ನು ಮತ್ತು ವಾರ್ಷಿಕ ಬಜೆಟ್‌ಗಳನ್ನು ಏರಿಯಾ ಸಭಾ ಮತ್ತು ವಾರ್ಡ್ ಸಮಿತಿಗಳ ನಿಯಮಿತ ಕಾರ್ಯನಿರ್ವಹಣೆಗೆ ಷರತ್ತು ಬದ್ಧವಾಗಿಒದಗಿಸುವುದು |
| 6 | ಮಹಾನಗರ ಪಾಲಿಕೆಗಳು ಮತ್ತು ಪುರಸಭೆಗಳು ಅಳವಡಿಸಿಕೊಳ್ಳಲು, ಏರಿಯಾ ಸಭಾ ಮತ್ತು ವಾರ್ಡ್ ಸಮಿತಿಗಳ ವ್ಯವಹಾರಕ್ಕಾಗಿ ಮಾದರಿ ಉಪ-ನಿಯಮಗಳನ್ನು ಪ್ರಕಟಿಸುವುದು |

# ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವುದು ಮತ್ತು ಉತ್ತೇಜನೆ ನೀಡುವುದು

**1**

ಪೌರ ಸಂಸ್ಥೆಗಳಿಗೆ ಸಂಬಂಧಿಸಿದ ಮಾಹಿತಿ, ನಾಗರೀಕ ಸೇವೆಗಳ ಮಾಹಿತಿ ಹಾಗು ಇತರ ಪ್ರಮುಖ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನಗರ ಸರ್ಕಾರದ ವೆಬ್‌ಸೈಟ್ ಮತ್ತು ಬೇರೆ ಬೇರೆ ವೇದಿಕೆ / ಮಾಧ್ಯಮಗಳ ಮೂಲಕ ಸಾರ್ವಜನಿಕಗೊಳಿಸುವುದು. (ಉ. ಕೌನ್ಸಿಲ್ ಸಭೆಗಳು ಮತ್ತು ಸ್ಥಾಯಿ ಸಮಿತಿ ಸಭೆಗಳ ನಡಾವಳಿಗಳು, ನಗರದ ಬಜೆಟ್ ದಾಖಲಾತಿಗಳು, ಯೋಜನೆಗಳ ಡಿಪಿಆರ್‌ಗಳು, ಪಾರ್ಕಿಂಗ್, ಬಳಕೆದಾರರ ಶುಲ್ಕಗಳು, ಇತ್ಯಾದಿಗಳಂತಹ ವಿಷಯಗಳಿಗೆ ಸಂಬಂಧಿಸಿದ ಪ್ರಮುಖ ನೀತಿ ದಾಖಲೆಗಳು ಮತ್ತು ಉಪ-ನಿಯಮಗಳು)

**2**

ನಗರ ಸರ್ಕಾರಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಮತ್ತು ಪೂರ್ಣಗೊಂಡ ಎಲ್ಲಾ ಯೋಜನೆಗಳ ವಿವರವನ್ನು ನೀಡುವ ಲೈವ್ ಪ್ರಾಜೆಕ್ಟ್‌ಗಳ ಡ್ಯಾಶ್‌ಬೋರ್ಡ್ ಗಳನ್ನು ಲಭ್ಯಪಡಿಸುವುದು. ಇದು ಟೆಂಡರ್‌ಗಳು, ಕಾಮಗಾರಿಯ ಕಾರ್ಯಾದೇಶಗಳು, ಬಿಲ್ ಪಾವತಿಗಳು ಇತ್ಯಾದಿಗಳ ಪ್ರಮುಖ ವಿವರಗಳನ್ನು ಸಹ ಒಳಗೊಂಡಿರಬೇಕು

**3**

ನಗರ ಸರ್ಕಾರದ ಪರಿಷತ್ತಿನ ಸಭೆಗಳು, ಸ್ಥಾಯಿ ಸಮಿತಿಗಳ ಸಭೆಗಳು ಮತ್ತು ಇತರ ಪ್ರಮುಖ ಸಭೆಗಳ ಲೈವ್ ವೆಬ್‌ಕಾಸ್ಟ್ ಮಾಡುವುದು

# ನಗರ ಸ್ಥಳೀಯ ಸರ್ಕಾರಗಳಿಗೆ ಅಧಿಕಾರ ವಿಕೇಂದ್ರೀಕರಣ

# ನಗರ ಸ್ಥಳೀಯ ಸರ್ಕಾರಗಳಿಗೆ ಅಧಿಕಾರ ವಿಕೇಂದ್ರೀಕರಣ

ಅನುಚ್ಛೇದ 243W (74 ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆ, 1992 ರಡಿ ಪರಿಚಯಿಸಲಾದ) 18 ಪ್ರಮುಖ ನಗರಾಭಿವೃದ್ಧಿ ಕಾರ್ಯಗಳನ್ನು ರಾಜ್ಯ ಸರ್ಕಾರಗಳು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಲು ಆದೇಶಿಸುತ್ತದೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು(CAG) ಲೆಕ್ಕ ಪರಿಶೋಧನೆಯ ಪ್ರಕಾರ*:


18 ಕಾರ್ಯಗಳಲ್ಲಿ** **17** ಕರ್ನಾಟಕ ಪೌರ ಸಂಸ್ಥೆಗಳ (KM) ಕಾಯಿದೆ, 1964 ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ (KMC) ಕಾಯಿದೆ, 1976 ರ ಮೂಲಕ ಕರ್ನಾಟಕದ ನಗರ ಸ್ಥಳೀಯ ಸರ್ಕಾರಗಳಿಗೆ ವರ್ಗಾಯಿಸಲಾಗಿದೆ

ಆದರೆ, ಅದೇ ಲೆಕ್ಕಪರಿಶೋಧನೆಯ ವರದಿಯ ಪ್ರಕಾರ:

**"ನಗರ ಸ್ಥಳೀಯ ಸರ್ಕಾರಗಳು ಮತ್ತು ಪೌರ ಸಂಸ್ಥೆಗಳು/ರಾಜ್ಯ ಸರ್ಕಾರಿ ಇಲಾಖೆಗಳ ನಡುವೆ ಕಾರ್ಯಗಳ ನಿರ್ವಹಣೆಯಲ್ಲಿ ಹಲವಾರು ಅತಿಕ್ರಮಣಗಳಿವೆ**

---

*ಮೂಲ: ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು(CAG) . 74 ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ. ಕರ್ನಾಟಕ ಸರ್ಕಾರ, 2020




**"ವಿಕೇಂದ್ರೀಕರಣವನ್ನು ಸಾಧಿಸುವ ದೃಷ್ಟಿಯನ್ನು ಯಥಾವತ್ತಾದ ರೂಪಕ್ಕೆ ಪರಿವರ್ತಿಸಲು ರಾಜ್ಯ ಸರ್ಕಾರ ನಿರ್ಣಾಯಕ ಕ್ರಮವನ್ನು ತೆಗೆದುಕೊಳ್ಳುವ ಅಗತ್ಯವಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ನಿಯೋಜಿಸಲಾದ ಪ್ರಕಾರ್ಯಗಳಿಗೆ ಸಂಬಂಧಪಟ್ಟಂತೆ ಅವುಗಳು ಅಗತ್ಯವಿರುವಷ್ಟು ಸ್ವಾಯತ್ತತೆಯನ್ನು ಅನುಭವಿಸುವುದನ್ನು ಖಚಿತ ಪಡಿಸಿಕೊಳ್ಳುವ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ."**

---


**ಗಮನಿಸಿ: ಪ್ರಾಯೋಗಿಕವಾಗಿ, ಕರ್ನಾಟಕದಲ್ಲಿ ರಾಜ್ಯ ಪೌರ ಕಾನೂನುಗಳು 74 ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆ 1993 ರ ಅಡಿಯಲ್ಲಿ ಗುರುತಿಸಲಾದ 18 ಕಾರ್ಯಗಳನ್ನು ಭಾಗಶಃ ವರ್ಗಾಯಿಸುತ್ತವೆ. ಆದ್ದರಿಂದ, KM/KMC ಕಾಯಿದೆಗಳ ಅಡಿಯಲ್ಲಿ ಒಂದು ಕಾರ್ಯದ ಭಾಗವನ್ನು ವರ್ಗಾಯಿಸಿದರೆ, ಹನ್ನೆರಡನೇ ಶೆಡ್ಯೂಲ್‌ನ ಅಡಿಯಲ್ಲಿ ಸಂಪೂರ್ಣ ಕಾರ್ಯವನ್ನು ನಗರ ಸ್ಥಳೀಯ ಸರ್ಕಾರಗಳಿಗೆ ವಿತರಿಸಲಾಗಿದೆ ಎಂದು ಪರಿಗಣಿಸಲಾಗಿದೆ. ಈ ಸನ್ನಿವೇಶದಲ್ಲಿ, CAG ಲೆಕ್ಕಪರಿಶೋಧನೆಯು 18 ಕಾರ್ಯಗಳಲ್ಲಿ 17 ಕಾರ್ಯಗಳನ್ನು ಕರ್ನಾಟಕದ ನಗರ ಸ್ಥಳೀಯ ಸರ್ಕಾರಗಳಿಗೆ ಹಸ್ತಾಂತರಿಸಲಾಗಿದೆ ಎಂದು ಪರಿಗಣಿಸಿದೆ

# ನಗರ ಸ್ಥಳೀಯ ಸರ್ಕಾರಗಳಿಗೆ ಅಧಿಕಾರ ವಿಕೇಂದ್ರೀಕರಣ

1. ಸಮಾಧಿ ಸೇವೆಗಳು
2. ಪ್ರಾಣಿ ಕಲ್ಯಾಣ
3. ಕಸಾಯಿಖಾನೆ ನಿಯಂತ್ರಣ
4. ನಗರ ಯೋಜನೆ
5. ಸ್ಲಂ ಉನ್ನತೀಕರಣ
6. ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ
7. ದುರ್ಬಲ ವರ್ಗಗಳ ಹಿತಾಸಕ್ತಿ
8. ಬಡತನ ನಿವಾರಣೆ
9. ರಸ್ತೆಗಳು ಮತ್ತು ಸೇತುವೆಗಳು
10. ಕಟ್ಟಡ ನಿಯಂತ್ರಣ
11. ನೀರು ಪೂರೈಕೆ
12. ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ
13. ನಗರ ಅರಣ್ಯ ರಕ್ಷಣೆ
14. ನಗರ ಸೌಕರ್ಯಗಳು
15. ಸಾಂಸ್ಕೃತಿಕ ಪ್ರಚಾರ
16. ಜನನ ಮರಣಗಳ ಲೆಕ್ಕಗಳು
17. ಸಾರ್ವಜನಿಕ ಸೌಕರ್ಯಗಳು
18. ಅಗ್ನಿಶಾಮಕ ಸೇವೆಗಳು

# ಕರ್ನಾಟಕದ ನಗರ ಸರ್ಕಾರಗಳಿಗೆ ಕಾರ್ಯಗಳ ವಿಕೇಂದ್ರೀಕರಣದ ವಾಸ್ತವದ ಸ್ಥಿತಿಗತಿ

ಕಾನೂನಿನ ಮೂಲಕ 17 ಕಾರ್ಯಗಳನ್ನು ನಗರ ಸರ್ಕಾರಗಳಿಗೆ ವಿತರಿಸಲಾಗಿದ್ದರೂ, ನಗರ ಸರ್ಕಾರಗಳು ಕೇವಲ **3** ಕಾರ್ಯಗಳಿಗೆ ಮಾತ್ರ ಜವಾಬ್ದಾರರಾಗಿರುತ್ತಾರೆ*




*ಇದು ರಾಜ್ಯ ಸರ್ಕಾರದ ಇಲಾಖೆಗಳೊಂದಿಗೆ ಯಾವುದೇ ಹಸ್ತಕ್ಷೇಪವಿಲ್ಲದೆ ನಗರ ಸರ್ಕಾರಗಳು ಸಂಪೂರ್ಣ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕಾರ್ಯಗಳನ್ನು ಉಲ್ಲೇಖಿಸುತ್ತದೆ


ಮೂಲ: ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು(CAG) . 74 ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ. ಕರ್ನಾಟಕ ಸರ್ಕಾರ, 2020

## ಅನುಚ್ಛೇದ 243W ಅಡಿಯಲ್ಲಿ ೧೨ನೇ ಶೆಡ್ಯೂಲ್ ಪ್ರಕಾರ ಸ್ಥಳೀಯ ಸರ್ಕಾರಗಳಿಗೆ ನೀಡಲಾಗಿರುವ ಅಧಿಕಾರ ವಿಕೇಂದ್ರೀಕರಣದ ನಿಜವಾದ ಸ್ಥಿತಿಗತಿ


**1** ಸಮಾಧಿ ಸೇವೆಗಳು





**2** ಪ್ರಾಣಿ ಕಲ್ಯಾಣ



**3** ಕಸಾಯಿಖಾನೆ ನಿಯಂತ್ರಣ



**9** ರಸ್ತೆಗಳು ಮತ್ತು ಸೇತುವೆಗಳು




**6** ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ



**7** ದುರ್ಬಲ ವರ್ಗಗಳ ಹಿತಾಸಕ್ತಿ



**8** ಬಡತನ ನಿವಾರಣೆ



**10** ಕಟ್ಟಡ ನಿಯಂತ್ರಣ



**11** ನೀರು ಪೂರೈಕೆ




**12** ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ



**13** ನಗರ ಅರಣ್ಯ ರಕ್ಷಣೆ




**14** ನಗರ ಸೌಕರ್ಯಗಳು




**15** ಸಾಂಸ್ಕೃತಿಕ ಪ್ರಚಾರ




**16** ಜನನ ಮರಣಗಳ ಲೆಕ್ಕಗಳು




**17** ಸಾರ್ವಜನಿಕ ಸೌಕರ್ಯಗಳು




**4** ನಗರ ಯೋಜನೆ



**5** ಸ್ಲಂ ಉನ್ನತೀಕರಣ




**18** ಅಗ್ನಿಶಾಮಕ ಸೇವೆಗಳು




# ನಗರ ಸ್ಥಳೀಯ ಸರ್ಕಾರಗಳಲ್ಲಿ ಚುನಾವಣೆಗಳು

# ಕರ್ನಾಟಕದ ನಗರ ಸರ್ಕಾರಗಳ ಚುನಾವಣೆಗಳು ಮತ್ತು ನಗರ ಪರಿಷತ್ತಿನ ಸ್ಥಿತಿಗತಿ

ಅನುಚ್ಛೇದ **243U** (74 ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆ, 1992 ರಡಿ ಪರಿಚಯಿಸಲಾದ) ನಗರ ಸ್ಥಳೀಯ ಸಂಸ್ಥೆಯ ಪರಿಷತ್ತಿನ ಅವಧಿ ಮುಗಿಯುವ ಮೊದಲು ಚುನಾವಣೆಗಳನ್ನು ಪೂರ್ಣಗೊಳಿಸುವುದನ್ನು ಕಡ್ಡಾಯಗೊಳಿಸುತ್ತದೆ









**"ರಾಜ್ಯ ಸರ್ಕಾರವು ಗಡಿ ಗುರುತಿಸುವ ಪ್ರಕ್ರಿಯೆಯನ್ನು ಪದೇ ಪದೇ ವಿಳಂಬ ಮಾಡುತ್ತಿರುವುದರಿಂದ, ಸಮಯಕ್ಕೆ ಸರಿಯಾಗಿ ಚುನಾವಣೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಗಡಿ ಗುರುತಿಸುವ ಕೆಲಸವನ್ನು ರಾಜ್ಯ ಚುನಾವಣಾ ಆಯೋಗಕ್ಕೆ ವಹಿಸಬೇಕು."**

*ಮೂಲ: ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು(CAG) . 74 ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ. ಕರ್ನಾಟಕ ಸರ್ಕಾರ, 2020

# ಕರ್ನಾಟಕದ ನಗರ ಸರ್ಕಾರಗಳ ಚುನಾವಣೆಗಳು ಮತ್ತು ನಗರ ಪರಿಷತ್ತಿನ ಸ್ಥಿತಿಗತಿ

2015-2020 ರ ನಡುವೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು(CAG) ನಡೆಸಿದ ಕರ್ನಾಟಕದಲ್ಲಿ 74 ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಪ್ರಕಾರ:




## ಗಮನಾರ್ಹ ವಿಳಂಬ

ಕರ್ನಾಟಕದಲ್ಲಿ **ಶೇ. 75** ರಷ್ಟು ಸ್ಥಳೀಯ ನಗರ ಸಂಸ್ಥೆಗಳು (ಅಂದರೆ, 280 ಗಳಲ್ಲಿ 210) ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಫಲಿತಾಂಶ ಪ್ರಕಟವಾದ 26 ತಿಂಗಳುಗಳು ಕಳೆದರು ನಗರ ಸ್ಥಳೀಯ ಸಂಸ್ಥೆಯ ಪರಿಷತ್ತನ್ನು ರಚಿಸಿರುವುದಿಲ್ಲ

## ಕಾನೂನು ವಿವಾದಗಳು

**ಶೇ. 89** ರಷ್ಟು ಸ್ಥಳೀಯ ನಗರ ಸಂಸ್ಥೆಗಳು (187) "ಮಹಾಪೌರರ/ಉಪ ಮಹಾಪೌರರ ಮತ್ತು ಅಧ್ಯಕ್ಷರ/ಉಪಾಧ್ಯಕ್ಷರ ಹುದ್ದೆಗಳಿಗೆ ಮೀಸಲಾತಿಯ ಸರದಿಗೆ ಸಂಬಂಧಿಸಿದಂತೆ ಸರ್ಕಾರವು ಅಳವಡಿಸಿಕೊಂಡ ಕಾರ್ಯವಿಧಾನಕ್ಕೆ ನ್ಯಾಯಾಲಯದ ಪ್ರಕರಣಗಳು ನಗರ ಸ್ಥಳೀಯ ಸಂಸ್ಥೆಯ ಪರಿಷತ್ತು ರಚನೆಯಾಗದಿರಲು ಪ್ರಮುಖ ಕಾರಣವೆಂದು ಉಲ್ಲೇಖಿಸಲಾಗಿದೆ

**ಮಾಧ್ಯಮ ವರದಿಗಳ ಪ್ರಕಾರ* ರಾಜ್ಯ ಸರ್ಕಾರದಿಂದ ಮೀಸಲಾತಿ ಘೋಷಣೆಯಲ್ಲಿ ತಡವಾದ ಕಾರಣ, ಕರ್ನಾಟಕದ 210 ಕ್ಕೂ ಹೆಚ್ಚು ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಿಗೆ, ಅಧ್ಯಕ್ಷ/ಉಪಾಧ್ಯಕ್ಷರ ಸ್ಥಾನದ 30 ತಿಂಗಳದ ಎರಡನೇ ಅವಧಿಯ ಚುನಾವಣೆ ಕನಿಷ್ಠ 6 ತಿಂಗಳು ವಿಳಂಬವಾಗಿದೆ. ಪೌರ ಸಂಸ್ಥೆಗಳ ಕಾಯ್ದೆ 1964 ರ ಅಡಿಯಲ್ಲಿ ಆಡಳಿತದಲ್ಲಿರುವ ಕರ್ನಾಟಕದ ಪಟ್ಟಣ ಪಂಚಾಯಿತಿಗಳು, ಪುರಸಭೆಗಳು ಮತ್ತು ನಗರಸಭೆಗಳು ಐದು ವರ್ಷಗಳ ಪರಿಷತ್ ಅವಧಿಯಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ತಲಾ 2.5 ವರ್ಷಗಳ ಎರಡು ಅವಧಿಗಳನ್ನು ಹೊಂದಿವೆ. ಈ ಪಟ್ಟಣಗಳು ಒಟ್ಟಾಗಿ ರಾಜ್ಯದ ಮೂರನೇ ಎರಡರಷ್ಟು ಭಾಗ ನಗರ ಸ್ಥಳೀಯ ಸರ್ಕಾರಗಳನ್ನು ಪ್ರತಿನಿಧಿಸುತ್ತವೆ**

*ಮೂಲ: ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು(CAG). 74 ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ. ಕರ್ನಾಟಕ ಸರ್ಕಾರ, 2020

*ಪೂಜಾರ್, ವಿಜಯ ಕರ್ನಾಟಕ, 9 ನವೆಂಬರ್ 2023, ಮತ್ತು ಮಣಸಿನಕಾಯಿ, ಟೈಮ್ಸ್ ಆಫ್ ಇಂಡಿಯಾ, 20 ನವೆಂಬರ್ 2023

# ಆಗಸ್ಟ್ 2024 ರಂತೆ ಕರ್ನಾಟಕದ ಮಹಾನಗರ ಪಾಲಿಕೆಗಳಲ್ಲಿನ ಚುನಾವಣಾ ಸ್ಥಿತಿಗತಿ

| ಮಹಾನಗರ ಪಾಲಿಕೆ | ಹಿಂದಿನ ಪಾಲಿಕೆ ಪರಿಷತ್ ಅವಧಿಯ ಮುಕ್ತಾಯ ದಿನಾಂಕ | ಚುನಾವಣೆ ನಡೆದ ದಿನಾಂಕ | ಎಷ್ಟು ತಿಂಗಳುಗಳಿಂದ ಪಾಲಿಕೆ ಚುನಾವಣೆ ನಡೆದಿಲ್ಲ? | ಪಾಲಿಕೆ ಪರಿಷತ್ ರಚನೆ/ಮೇಯರ್ ಚುನಾವಣೆ ದಿನಾಂಕ | ಎಷ್ಟು ತಿಂಗಳುಗಳಿಂದ ಪಾಲಿಕೆ ಪರಿಷತ್ ರಚನೆ/ಮೇಯರ್ ಚುನಾವಣೆ ವಿಳಂಬವಾಗಿದೆ? | ಚುನಾಯಿತ ಪಾಲಿಕೆ ಪರಿಷತ್ ಸ್ಥಾಪಿಸುವಲ್ಲಿ ಒಟ್ಟು ವಿಳಂಬ |
|---|---|---|---|---|---|---|
| ಬೆಂಗಳೂರು | ಸೆಪ್ಟೆಂಬರ್ 2020 | ಇನ್ನೂ ನಡೆದಿಲ್ಲ | 47 ತಿಂಗಳು | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಸುಮಾರು 4 ವರ್ಷ+ |
| ಬಳ್ಳಾರಿ | ಮಾರ್ಚ್ 2019 | ಏಪ್ರಿಲ್ 2021 | 25 ತಿಂಗಳು | ಮಾರ್ಚ್2022 | 11 ತಿಂಗಳು | 03 years |
| ಬೆಳಗಾವಿ | ಮಾರ್ಚ್ 2019 | ಸೆಪ್ಟೆಂಬರ್ 2021 | 30 ತಿಂಗಳು | ಫೆಬ್ರವರಿ 2023 | 17 ತಿಂಗಳು | ಸುಮಾರು 4 ವರ್ಷ |
| ದಾವಣಗೆರೆ | ಮಾರ್ಚ್ 2019 | ನವೆಂಬರ್ 2019 | 08 ತಿಂಗಳು | ಫೆಬ್ರವರಿ 2020 | 03 ತಿಂಗಳು | ಸುಮಾರು 1 ವರ್ಷ |
| ಹುಬ್ಬಳ್ಳಿ-ಧಾರವಾಡ | ಮಾರ್ಚ್ 2019 | ಸೆಪ್ಟೆಂಬರ್ 2021 | 30 ತಿಂಗಳು | ಮೇ2022 | 08 ತಿಂಗಳು | 3 ವರ್ಷಗಳಿಗಿಂತ ಹೆಚ್ಚು |
| ಕಲಬುರಗಿ | ಏಪ್ರಿಲ್ 2019 | ಸೆಪ್ಟೆಂಬರ್ 2021 | 30 ತಿಂಗಳು | ಮಾರ್ಚ್ 2023 | 18 ತಿಂಗಳು | 4 ವರ್ಷಗಳು |
| ಮಂಗಳೂರು | ಮಾರ್ಚ್ 2019 | ನವೆಂಬರ್ 2019 | 08 ತಿಂಗಳು | ಫೆಬ್ರವರಿ 2020 | 03 ತಿಂಗಳು | ಸುಮಾರು 1 ವರ್ಷ |
| ಮೈಸೂರು | ನವೆಂಬರ್ 2023 | ಇನ್ನೂ ನಡೆದಿಲ್ಲ | 09 ತಿಂಗಳು | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | 09 ತಿಂಗಳು++ |
| ಶಿವಮೊಗ್ಗ | ನವೆಂಬರ್ 2023 | ಇನ್ನೂ ನಡೆದಿಲ್ಲ | 09 ತಿಂಗಳು | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | 09 ತಿಂಗಳು++ |
| ತುಮಕೂರು | ಆಗಸ್ಟ್ 2023 | ಇನ್ನೂ ನಡೆದಿಲ್ಲ | 12 ತಿಂಗಳು | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಸುಮಾರು 1 ವರ್ಷ |
| ವಿಜಯಪುರ | ಆಗಸ್ಟ್ 2019 | ಅಕ್ಟೋಬರ್ 2022 | 38 ತಿಂಗಳು | ಜನವರಿ2024 | 15 ತಿಂಗಳು | ಸುಮಾರು 4.5 ವರ್ಷ |
| ಸರಾಸರಿ | - | - | 22 ತಿಂಗಳು | - | 11 ತಿಂಗಳು | 2.5 years (30 ತಿಂಗಳು) |



# ವಾರ್ಡ್ ಸಮಿತಿಗಳು ಮತ್ತು ಏರಿಯಾ ಸಭಾಗಳ ಮೂಲಕ ಸಾಂಸ್ಥಿಕವಾದ ನಾಗರಿಕ ಭಾಗವಹಿಸುವಿಕೆ

# ವಾರ್ಡ್ ಸಮಿತಿಗಳು ಮತ್ತು ಏರಿಯಾ ಸಭಾಗಳಿಗೆ ಆಡಳಿತದ ಚೌಕಟ್ಟು

- ಸಂವಿಧಾನದ 74ನೇ ತಿದ್ದುಪಡಿ ಕಾಯ್ದೆ 1992 ರ ಮೂಲಕ ಪರಿಚಯಿಸಲಾದ ಅನುಚ್ಛೇದ 243S, 3 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳಲ್ಲಿ ವಾರ್ಡ್ ಸಮಿತಿಗಳನ್ನು ಕಡ್ಡಾಯಗೊಳಿಸುತ್ತದೆ

- ಕರ್ನಾಟಕದ ಮೂರು ಪೌರ ಕಾಯ್ದೆಗಳು ನಾಗರಿಕರ ಭಾಗವಹಿಸುವಿಕೆಯನ್ನು ಸ್ಥಳೀಯ ಆಡಳಿತದ ಅವಿಭಾಜ್ಯ ಅಂಗವನ್ನಾಗಿ ಮಾಡುತ್ತವೆ ಮತ್ತು ರಾಜ್ಯದ ಎಲ್ಲಾ ಪೌರ ಸಂಸ್ಥೆಗಳಲ್ಲಿ ವಾರ್ಡ್ ಸಮಿತಿಗಳು ಮತ್ತು ಏರಿಯಾ ಸಭಾಗಳಿಗೆ ಅವಕಾಶ ಕಲ್ಪಿಸುತ್ತವೆ

- ಕರ್ನಾಟಕ ಪೌರ ಸಂಸ್ಥೆಗಳ ಕಾಯ್ದೆ 1964 ರ ಅಡಿಯಲ್ಲಿ ನೆರೆಹೊರೆ ಗುಂಪುಗಳ ರಚನೆಗೂ ಅವಕಾಶವಿದೆ

- ಆದರೆ, ಈ ವೇದಿಕೆಗಳ ದೈನಂದಿನ ವ್ಯವಹಾರಗಳಿಗೆ ಕಾನೂನು ಚೌಕಟ್ಟುಗಳನ್ನು ಸಂಪೂರ್ಣವಾಗಿ ಅಥವಾ ಸರಿಯಾಗಿ ವ್ಯಾಖ್ಯಾನಿಸಲಾಗಿಲ್ಲ:
  - ಪಟ್ಟಣ ಪಂಚಾಯಿತಿ / ಪುರಸಭೆ / ನಗರ ಸಭೆಗಳಲ್ಲಿ ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳ ಕಾರ್ಯನಿರ್ವಹಣೆಗೆ ಯಾವುದೇ ನಿಯಮಗಳನ್ನು ಅಥವಾ ಮಾರ್ಗಸೂಚಿಗಳನ್ನು ಪ್ರಕಟಿಸಲಾಗಿಲ್ಲ
  - ಮಹಾನಗರ ಪಾಲಿಕೆಗಳಲ್ಲಿ ಏರಿಯಾ ಸಭಾಗಳ ಕಾರ್ಯನಿರ್ವಹಣೆಗೆ ಯಾವುದೇ ನಿಯಮಗಳನ್ನು ಅಥವಾ ಮಾರ್ಗಸೂಚಿಗಳನ್ನು ಪ್ರಕಟಿಸಲಾಗಿಲ್ಲ
  - ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆಯ ಕಲಂ 13J ರ ಅಡಿಯಲ್ಲಿ ಕರ್ನಾಟಕದ ಯಾವುದೇ ಮಹಾನಗರ ಪಾಲಿಕೆಯಲ್ಲಿ ವಾರ್ಡ್ ಸಮಿತಿ* ಮತ್ತು ಏರಿಯಾ ಸಭಾಗಳಿಗೆ ಉಪನಿಯಮಗಳನ್ನು ಪ್ರಕಟಿಸಲಾಗಿಲ್ಲ

---

ಆಗಸ್ಟ್ 2024 ರಂತೆ, ಮಂಗಳೂರು ಮಹಾನಗರ ಪಾಲಿಕೆಯು ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳಿಗೆ ಉಪ-ನಿಯಮಗಳನ್ನು ಪರಿಶೀಲಿಸಲು ಪರಿಷತ್ ಸಮಿತಿಯನ್ನು ರಚಿಸಿದೆ

| ಶಾಸನದ ನಿಬಂಧನೆ | ಕಾನೂನು | ಕಾಯಿದೆಯಲ್ಲಿ ಮಾಡಲಾದ ನಿಬಂಧನೆಗಳು | ರಾಜ್ಯ ಸರ್ಕಾರದಿಂದ ಪ್ರಕಟಿಸಲಾದ ನಿಯಮಗಳು | ನಗರ ಸ್ಥಳೀಯ ಸಂಸ್ಥೆಗಳಿಂದ ಪ್ರಕಟಿಸಲಾದ ಉಪ-ನಿಯಮಗಳು |
|---|---|---|---|---|
| ವಾರ್ಡ್ ಸಮಿತಿ | ಕರ್ನಾಟಕ ಪೌರ ಸಂಸ್ಥೆಗಳಕಾಯಿದೆ, 1964 | ಹೌದು<br>ಕಲಂ 80M | ಇಲ್ಲ<br>ಕಲಂ323(2)(a)<br>ಕಲಂ80-O(2) | ಅನ್ವಯಿಸುವುದಿಲ್ಲ<br>ನಿಬಂಧನೆ ಇಲ್ಲ |
| ಏರಿಯಾ ಸಭಾ | | ಹೌದು<br>ಕಲಂ 80G | ಇಲ್ಲ<br>ಕಲಂ323(2)(a)<br>ಕಲಂ 80J(2) | |
| ನೆರೆಹೊರೆಯ ಗುಂಪು | | ಹೌದು<br>ಕಲಂ 80B | ಇಲ್ಲ<br>ಕಲಂ 80E(2) | |
| ವಾರ್ಡ್ ಸಮಿತಿ | ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯಿದೆ, 1976 | ಹೌದು<br>ಕಲಂ 13H | ಹೌದು<br>ಕಲಂ 13K | ಇಲ್ಲ<br>ಕಲಂ 13J |
| ಏರಿಯಾ ಸಭಾ | | ಹೌದು<br>ಕಲಂ 13C | ಇಲ್ಲ<br>ಕಲಂ 13K | ಇಲ್ಲ<br>ಕಲಂ 13J |
| ನೆರೆಹೊರೆಯ ಗುಂಪು | | ಅನ್ವಯಿಸುವುದಿಲ್ಲ<br>ನಿಬಂಧನೆ ಇಲ್ಲ | ಅನ್ವಯಿಸುವುದಿಲ್ಲ<br>ನಿಬಂಧನೆ ಇಲ್ಲ | ಅನ್ವಯಿಸುವುದಿಲ್ಲ<br>ನಿಬಂಧನೆ ಇಲ್ಲ |
| ವಾರ್ಡ್ ಸಮಿತಿ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯಿದೆ, 2020 | ಹೌದು<br>ಕಲಂ 82 | ಇಲ್ಲ<br>ಕಲಂ85(13)<br>ಕಲಂ86(2)<br>ಕಲಂ316(2)(i) | ಅನ್ವಯಿಸುವುದಿಲ್ಲ<br>ನಿಬಂಧನೆ ಇಲ್ಲ |
| ಏರಿಯಾ ಸಭಾ | | ಹೌದು<br>ಕಲಂ 90 | ಅನ್ವಯಿಸುವುದಿಲ್ಲ<br>ನಿಬಂಧನೆ ಇಲ್ಲ | |
| ನೆರೆಹೊರೆಯ ಗುಂಪು | | ಅನ್ವಯಿಸುವುದಿಲ್ಲ<br>ನಿಬಂಧನೆ ಇಲ್ಲ | ಅನ್ವಯಿಸುವುದಿಲ್ಲ<br>ನಿಬಂಧನೆ ಇಲ್ಲ | |

# ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳಿಗೆ ಶಾಸನಗಳ ಕಾಲಾನುಕ್ರಮ

## 1999

ಕರ್ನಾಟಕದ ಮೊದಲ ವಾರ್ಡ್ ಸಮಿತಿಗಳನ್ನು ಅಂದಿನ ಬೆಂಗಳೂರು ಮಹಾನಗರ ಪಾಲಿಕೆ (BMP) ಯಲ್ಲಿ ರಚಿಸಲಾಯಿತು

## 2011

ಮಹಾನಗರಗಳಲ್ಲಿ ಏರಿಯಾ ಸಭಾ ಮತ್ತು ವಾರ್ಡ್ ಸಮಿತಿಗಳ ರಚನೆಯನ್ನು ಒಳಪಡಿಸಲು ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976 ಅನ್ನು ತಿದ್ದುಪಡಿ ಮಾಡಲಾಯಿತು. ಹೀಗಾಗಿ ರಾಜ್ಯದ ದೊಡ್ಡ ನಗರಗಳಲ್ಲಿ ಸಮುದಾಯದ ಸಹಭಾಗಿತ್ವವನ್ನು ಸಾಂಸ್ಥಿಕಗೊಳಿಸುವಲ್ಲಿ ಇದು ಮೊದಲ ಹೆಜ್ಜೆಯಾಗಿದೆ

## 2016

ಕರ್ನಾಟಕ ಮಹಾನಗರ ಪಾಲಿಕೆ (ವಾರ್ಡ್ ಸಮಿತಿ) ನಿಯಮಗಳು, 2016 ಅನ್ನು ಪ್ರಕಟಿಸುವ ಮೂಲಕ, ಕರ್ನಾಟಕದ ದೊಡ್ಡ ನಗರಗಳಲ್ಲಿ ವಾರ್ಡ್ ಸಮಿತಿಗಳನ್ನು ಮತ್ತಷ್ಟು ಸಾಂಸ್ಥಿಕಗೊಳಿಸಲಾಯಿತು. ಆದರೆ, ಈ ನಿಯಮಗಳು ಏರಿಯಾ ಸಭಾಗಳಿಗೆ ಅನ್ವಹಿಸುವುದಿಲ್ಲ

## 2020

ಕರ್ನಾಟಕ ಪೌರ ಸಂಸ್ಥೆಗಳ ಕಾಯಿದೆ, 1964 ಅನ್ನೂ ತಿದ್ದುಪಡಿಗೊಳಿಸಿ, ರಾಜ್ಯದ ಸಣ್ಣ ನಗರಗಳು ಮತ್ತು ಪಟ್ಟಣಗಳಲ್ಲಿ ವಾರ್ಡ್ ಸಮಿತಿ, ಏರಿಯಾ ಸಭಾ ಮತ್ತು ನೆರೆಹೊರೆಯ ಗುಂಪುಗಳ ರಚನೆಯನ್ನು ಕಡ್ಡಾಯಗೊಳಿಸಲಾಗಿದೆ. ಆದರೆ ಇಲ್ಲಿಯವರೆಗೆ ಯಾವುದೇ ನಿಯಮಗಳನ್ನು ಪ್ರಕಟಿಸಲಾಗಿಲ್ಲ

## 2020

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯಿದೆ, 2020 ಅಂಗೀಕರಿಸಲಾಗಿದ್ದು ಮಹಾನಗರ ಪಾಲಿಕೆಗೆ ಚುನಾವಣೆ ಮುಗಿದ 30 ದಿನಗಳೊಳಗೆ ಬೆಂಗಳೂರಿನಲ್ಲಿ ವಾರ್ಡ್ ಸಮಿತಿಗಳ ರಚನೆಯನ್ನು ಕಡ್ಡಾಯಗೊಳಿಸಲಾಗಿದೆ. ಆದರೆ ಇಲ್ಲಿಯವರೆಗೆ ಯಾವುದೇ ನಿಯಮಗಳನ್ನು ಪ್ರಕಟಿಸಲಾಗಿಲ್ಲ

# ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳಿಗೆ ಶಾಸನಗಳ ಕಾಲಾನುಕ್ರಮ

- ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳನ್ನು ಕಾರ್ಯಗತಗೊಳಿಸುವ ಮೂಲಕ ನಗರ ಆಡಳಿತದಲ್ಲಿ ನಾಗರಿಕರ ಭಾಗವಹಿಸುವಿಕೆಯನ್ನು ಸಾಂಸ್ಥಿಕಗೊಳಿಸಲು ಸರ್ಕಾರವನ್ನು ಒತ್ತಾಯಿಸುವಲ್ಲಿ ನಾಗರಿಕರು ಮತ್ತು ನಾಗರಿಕ ಸಮಾಜ ಸಂಸ್ಥೆಗಳು ಮಹತ್ವದ ಪಾತ್ರವನ್ನು ವಹಿಸಿವೆ

- ಕರ್ನಾಟಕ ಉಚ್ಚ ನ್ಯಾಯಾಲಯದ ದಿಟ್ಟ ಆದೇಶಗಳು ಬೆಂಗಳೂರು ಮತ್ತು ಮಂಗಳೂರಿನಂತಹ ಕೆಲವು ಮಹಾನಗರಗಳಲ್ಲಿ ವಾರ್ಡ್ ಸಮಿತಿಗಳನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ

- ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು(CAG), ಕರ್ನಾಟಕ ಆಡಳಿತ ಸುಧಾರಣಾ ಆಯೋಗ - 2, ಮತ್ತು ಕರ್ನಾಟಕ ರಾಜ್ಯ ಹಣಕಾಸು ಆಯೋಗದಂತಹ ಸಾಂವಿಧಾನಿಕ ಮತ್ತು ಶಾಸನಬದ್ಧ ಪ್ರಾಧಿಕಾರಗಳು ನಗರ ಆಡಳಿತದಲ್ಲಿ ನಾಗರಿಕರ ಭಾಗವಹಿಸುವಿಕೆಯ ಮಹತ್ವವನ್ನು ಒತ್ತಿಹೇಳಿವೆ, ಹಾಗು ರಾಜ್ಯದ ನಗರಗಳಲ್ಲಿ ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳ ರಚನೆಗೆ ಶಿಫಾರಸು ಮಾಡಿವೆ


***2024 ಫೆಬ್ರವರಿ 13 ರಂದು ನಡೆದ ಕರ್ನಾಟಕ ವಿಧಾನ ಮಂಡಲದ ಅಧಿವೇಶನದಲ್ಲಿ ನಗರಾಭಿರುದ್ಧಿ ಸಚಿವರು ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ 95 ಏರಿಯಾ ಸಭಾಗಳನ್ನು ರಚಿಸಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ, ಜನಾಗ್ರಹ ಸಂಸ್ಥೆಗೆ ತಿಳಿದಿರುವಂತೆ, ಅವು ಕಾರ್ಯಗತವಾಗಿಲ್ಲ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ 11 ಡಿಸೆಂಬರ್ 2019 ರಂದು ಪಾಲಿಕೆಯಿಂದ ಏರಿಯಾ ಸಭಾಗಳನ್ನು ರಚಿಸಿ ಅಧಿಸೂಚನೆ ಹೊರಡಿಸಲಾಗಿದೆ. ಆದರೆ, ಅವು ಇನ್ನೂ ಕಾರ್ಯಗತವಾಗಿಲ್ಲ

ಈ ಹಂತದಲ್ಲಿ ಗಮನಿಸಬೇಕಾದ ವಿಷಯವೆಂದರೆ ಜನಾಗ್ರಹ ಸಂಸ್ಥೆಗೆ ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳ ಸ್ಥಿತಿಗತಿಗೆ ಸಂಬಂಧಿಸಿದ ಲಭ್ಯವಿರುವ ಮಾಹಿತಿಯು, ರಾಜ್ಯದ 11 ಮಹಾನಗರ ಪಾಲಿಕೆಗಳಿಗೆ ಮಾತ್ರ ಸೀಮಿತವಾಗಿದೆ. ಈ ಮಾಹಿತಿಯು, ಸಾರ್ವಜನಿಕ ವಲಯದಲ್ಲಿ ಅಲಭ್ಯವಿದ್ದು, ಜನಾಗ್ರಹ ಸಂಸ್ಥೆಯ ನಾಗರೀಕ ಸಂಸ್ಥೆಗಳ, ಸಮುದಾಯಗಳ ಹಾಗು ಮಹಾನಗರ ಪಾಲಿಕೆಗಳ ಜೊತೆಗಿನ ನಿಕಟ ಸಂಪರ್ಕದ ಮೂಲಕ ಸಂಗ್ರಹಿಸಲಾಗಿದೆ

# ಕರ್ನಾಟಕದಲ್ಲಿ ವಾರ್ಡ್ ಸಮಿತಿಗಳನ್ನು ರಚಿಸುವ ಪ್ರಕ್ರಿಯೆ

- ಯಾವುದೇ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಾರ್ಡ್ ಸಮಿತಿಗಳನ್ನು ರಚಿಸುವ ಹಂತ-ವಾರು ಪ್ರಕ್ರಿಯೆಯನ್ನು ಹಾಗು ನಿಗದಿತ ವೇಳಾಪಟ್ಟಿಯನ್ನು ಒಳಗೊಂಡಿರುವ ಮಾರ್ಗಸೂಚಿಗಳು ಅಥವಾ ಪ್ರಮಾಣಿತ ಕಾರ್ಯಾಚರಣೆಯ ವಿಧಾನ (ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್-SOP) ರಾಜ್ಯ ಅಥವಾ ಸ್ಥಳೀಯ ನಗರ ಸರ್ಕಾರಗಳಿಂದ ಪ್ರಕಟಿಸಲಾಗಿರುವುದಿಲ್ಲ

- ನಗರ ಸ್ಥಳೀಯ ಸರ್ಕಾರಗಳು ಮತ್ತು ನಾಗರಿಕರೊಂದಿಗೆ ಜನಾಗ್ರಹದ ವ್ಯಾಪಕವಾದ ಕೆಲಸದ ಆಧಾರದ ಮೇಲೆ ವಾರ್ಡ್ ಸಮಿತಿಗಳನ್ನು ರಚಿಸುವ ಪಾರದರ್ಶಕ ಪ್ರಕ್ರಿಯೆಯನ್ನು ಕೆಳಗೆ ತಿಳಿಸಲಾಗಿದೆ. ಇದನ್ನು ವಿವಿಧ ನಗರ ಸಂಸ್ಥೆಗಳು ಭಾಗಶಃ ಅನುಸರಿಸುತ್ತಿವೆ:





**ಸೂಕ್ತ ನಿಯಮಗಳನ್ನು ಪ್ರಕಟಿಸುವ ಮೂಲಕ ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳನ್ನು ರಚಿಸುವ ಪ್ರಮಾಣಿತ ಪ್ರಕ್ರಿಯೆಯನ್ನು ಸಾಂಸ್ಥಿಕಗೊಳಿಸುವ ಅವಶ್ಯಕತೆಯಿದೆ..**

# ಜುಲೈ 2024 ರಂತೆ ಕರ್ನಾಟಕದ ಮಹಾನಗರ ಪಾಲಿಕೆಗಳಲ್ಲಿನ ವಾರ್ಡ್ ಸಮಿತಿಗಳ ಸ್ಥಿತಿಗತಿ

| ಮಹಾನಗರ ಪಾಲಿಕೆ | ಪಾಲಿಕೆ ಪರಿಷತ್ ಅವಧಿ ಮುಕ್ತಾಯದ ನಂತರ ಮಹಾನಗರ ಪಾಲಿಕೆ ಚುನಾವಣೆಗಳು ನಡೆಸಲಾಗಿದೆಯೇ? | ಪಾಲಿಕೆ ಪರಿಷತ್ ರಚನೆಯಾಗಿದೆಯೇ? | ವಾರ್ಡ್ ಸಮಿತಿಗಳಿಗೆ ಸದಸ್ಯತ್ವಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆಯೇ? | ವಾರ್ಡ್ ಸಮಿತಿಸದಸ್ಯರನ್ನು ನಾಮನಿರ್ದೇಶನ ಮಾಡಲು ಆಯ್ಕೆ ಸಮಿತಿಯನ್ನು ರಚಿಸಲಾಗಿದೆಯೇ? | ಆಯ್ಕೆ ಸಮಿತಿಯಿಂದ ವಾರ್ಡ್ ಸಮಿತಿ ಸದಸ್ಯತ್ವದ ಕರಡುಪಟ್ಟಿಯನ್ನು ಅನುಮೋದನೆಗಾಗಿ ಪಾಲಿಕೆ ಪರಿಷತ್ತಿಗೆ ಸಲ್ಲಿಸಲಾಗಿದೆಯೇ? | ವಾರ್ಡ್ ಸಮಿತಿ ಸದಸ್ಯತ್ವ ಪಟ್ಟಿಗೆ ಪಾಲಿಕೆ ಪರಿಷತ್ ಅನುಮೋದನೆ ನೀಡಿದೆಯೇ? | ವಾರ್ಡ್ ಸಮಿತಿಗಳನ್ನು ರಚಿಸಿ ಅಧಿಸೂಚನೆ ಹೊರಡಿಸಲಾಗಿದೆಯೇ? | ವಾರ್ಡ್ ಸಮಿತಿಗಳು ಕಾರ್ಯ ನಿರ್ವಹಿಸುತ್ತಿವೆಯೇ? |
|---|---|---|---|---|---|---|---|---|
| ಬೆಂಗಳೂರು | ಇಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ |
| ಬಳ್ಳಾರಿ | ಹೌದು | ಹೌದು | ಹೌದು | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |
| ಬೆಳಗಾವಿ | ಹೌದು | ಹೌದು | ಹೌದು | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |
| ದಾವಣಗೆರೆ | ಹೌದು | ಹೌದು | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |
| ಹುಬ್ಬಳ್ಳಿ-ಧಾರವಾಡ | ಹೌದು | ಹೌದು | ಹೌದು | ಹೌದು | ಇಲ್ಲ | ಇಲ್ಲ | ಇಲ್ಲ | ಇಲ್ಲ |
| ಕಲಬುರಗಿ | ಹೌದು | ಹೌದು | ಹೌದು | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |
| ಮಂಗಳೂರು | ಹೌದು | ಹೌದು | ಹೌದು | ಹೌದು | ಹೌದು | ಹೌದು | ಹೌದು (ಫೆಬ್ರವರಿ 2022) | ಹೌದು (ಅನಿಯಮಿತ) |
| ಮೈಸೂರು | ಇಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ |
| ಶಿವಮೊಗ್ಗ | ಇಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ |
| ತುಮಕೂರು | ಇಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ |
| ವಿಜಯಪುರ | Yes | ಹೌದು | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |

# ವಿಧಾನ ಪರಿಷತ್ತಿನಲ್ಲಿ ನಗರಾಭಿವೃದ್ಧಿ ಸಚಿವರ ಭರವಸೆ ಇನ್ನೂ ಫಲ ನೀಡಿಲ್ಲ (1/2)

ಸೆಪ್ಟೆಂಬರ್ 2017 ಮತ್ತು ಜೂನ್ 2019 ರಲ್ಲಿ ನಗರಾಭಿವೃದ್ಧಿ ಇಲಾಖೆ (UDD) ಪೌರಾಡಳಿತ ನಿರ್ದೇಶನಾಲಯ (DMA) ಮತ್ತು ಕರ್ನಾಟಕದ ಎಲ್ಲಾ 10 ಮಹಾನಗರ ಪಾಲಿಕೆಗಳ (ಬಿಬಿಎಂಪಿ ಹೊರತು ಪಡಿಸಿ) ಆಯುಕ್ತರಿಗೆ ಸುತ್ತೋಲೆಗಳನ್ನು ಹೊರಡಿಸಿ, ಕರ್ನಾಟಕ ಮಹಾನಗರ ಪಾಲಿಕೆಗಳ (ವಾರ್ಡ್ ಸಮಿತಿ) ನಿಯಮಗಳು, 2016 ರ ಅನುಸಾರ ತಕ್ಷಣವೇ ವಾರ್ಡ್ ಸಮಿತಿಗಳನ್ನು ರಚಿಸುವಂತೆ ನಿರ್ದೇಶಿಸಿದೆ



ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 116 ಎಂಎನ್ಇ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:05.09.2017

ಸುತ್ತೋಲೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 507 ಎಂಎನ್‌ವೈ 2012, ದಿನಾಂಕ: 22.06.2016ರಲ್ಲಿ ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ಸ್ (ವಾರ್ಡ್ ಕಮಿಟಿ) ರೂಲ್ಸ್ 2016 ನಿಯಮಗಳನ್ನು ಜಾರಿಗೆ ತರಲಾಗಿರುತ್ತದೆ.

ಸದರಿ ನಿಯಮಗಳನ್ವಯ ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ವಾರ್ಡ್ ಕಮಿಟಿಗಳನ್ನು ರಚಿಸಲು ಕ್ರಮ ವಹಿಸಿರುವುದು ಕಂಡು ಬಂದಿರುವುದಿಲ್ಲ. ಆದ್ದರಿಂದ, ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ಸ್ (ವಾರ್ಡ್ ಕಮಿಟಿ) ರೂಲ್ಸ್ 2016 ನಿಯಮಗಳಲ್ಲಿ ವಿವರಿಸಿರುವಂತೆ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕೂಡಲೇ ವಾರ್ಡ್ ಕಮಿಟಿಗಳನ್ನು ರಚಿಸಲು ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಈ ಮೂಲಕ ಸೂಚಿಸಿದೆ.


(ವೈ.ಗೋಪಾಲ್)
ಸರ್ಕಾರದ ಅಧೀನ ಕಾರ್ಯದರ್ಶಿ
(ಮಹಾನಗರಪಾಲಿಕೆ-2 ಮತ್ತು ಸಮನ್ವಯ)
ನಗರಾಭಿವೃದ್ಧಿ ಇಲಾಖೆ

ಗೆ:
(1) ನಿರ್ದೇಶಕರು, ಪೌರಾಡಳಿತ ಇಲಾಖೆ, ಬೆಂಗಳೂರು.
(2) ಆಯುಕ್ತರು, ಮೈಸೂರು, ಹುಬ್ಬಳ್ಳಿ-ಧಾರವಾಡ/ಬೆಳಗಾವಿ/ವಿಜಯಪುರ/ದಾವಣಗೆರೆ/ಶಿವಮೊಗ್ಗ/ಮಂಗಳೂರು/ಕಲಬುರಗಿ/ಬಳ್ಳಾರಿ/ತುಮಕೂರು/ ಮಹಾನಗರ ಪಾಲಿಕೆ.
(3) ಶಾಖಾ ರಕ್ಷಕ ಕಡತ/ಹೆಚ್ಚುವರಿ ಪ್ರತಿ-03

**05-09-2017 ರಂದು ಸುತ್ತೋಲೆ ಹೊರಡಿಸಲಾಗಿದೆ**

## ವೈ ಗೋಪಾಲ್

**ಉಪಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ**
**ಕರ್ನಾಟಕ ಸರ್ಕಾರ**



ಅಂಜುಂ ಪರ್ವೇಜ್, ಭಾ.ಆ.ಸೇ.

ದೂರವಾಣಿ: 22353942
22035079
ಫ್ಯಾಕ್ಸ್: 22250318

**19-06-2019 ರಂದು ಸುತ್ತೋಲೆ ಹೊರಡಿಸಲಾಗಿದೆ**


## ಅಂಜುಮ್ ಪರ್ವೇಜ್, ಐ.ಎ.ಎಸ್

**ಪ್ರಧಾನ ಕಾರ್ಯದರ್ಶಿ**
**ನಗರಾಭಿವೃದ್ಧಿ ಇಲಾಖೆ**
**ಕರ್ನಾಟಕ ಸರ್ಕಾರ**

# ವಿಧಾನ ಪರಿಷತ್ತಿನಲ್ಲಿ ನಗರಾಭಿವೃದ್ಧಿ ಸಚಿವರ ಭರವಸೆ ಇನ್ನೂ ಫಲ ನೀಡಿಲ್ಲ (2/2)

ಫೆಬ್ರವರಿ 2021 ರಲ್ಲಿ, ಪೌರಾಡಳಿತ ನಿರ್ದೇಶನಾಲಯ ಸುತ್ತೋಲೆ ಹೊರಡಿಸಿ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ನಗರಾಭಿವೃದ್ಧಿ ಕೋಶಗಳ ಯೋಜನಾ ನಿರ್ದೇಶಕರಿಗೆ ಕರ್ನಾಟಕ ಪೌರ ಸಂಸ್ಥೆಗಳ ಕಾಯ್ದೆ 1964 ರ ಅಡಿಯಲ್ಲಿ ಎಲ್ಲಾ ನಗರ ಸ್ಥಳೀಯ ಸರ್ಕಾರಗಳಲ್ಲಿ (ULG) 15 ದಿನಗಳೊಳಗೆ ವಾರ್ಡ್ ಸಮಿತಿ, ಏರಿಯಾ ಸಭಾ ಮತ್ತು ನೆರೆಹೊರೆ ಗುಂಪುಗಳನ್ನು ರಚಿಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದೆ

ಜುಲೈ 2022 ರಲ್ಲಿ, ವಿವಿಧ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ಅಡಿಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶಗಳ ಹಿನ್ನೆಲೆಯಲ್ಲಿ, ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯ ಮತ್ತು ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರಿಗೆ ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳನ್ನು ರಚಿಸಲು ತಕ್ಷಣ ಕ್ರಮ ಕೈಗೊಳ್ಳುವಂತೆ ದಿಟ್ಟ ಆದೇಶ ಹೊರಡಿಸಿದೆ



ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 116 ಎಂಎನ್‌ಇ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:05.09.2017

ಸುತ್ತೋಲೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 507 ಎಂಎನ್‌ವೈ 2012, ದಿನಾಂಕ: 22.06.2016ರಲ್ಲಿ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ಸ್ (ವಾರ್ಡ್ ಕಮಿಟಿ) ರೂಲ್ಸ್ 2016 ನಿಯಮಗಳನ್ನು ಜಾರಿಗೆ ತರಲಾಗಿರುತ್ತದೆ.

ಸದರಿ ನಿಯಮಗಳನ್ವಯ ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ವಾರ್ಡ್ ಕಮಿಟಿಗಳನ್ನು ರಚಿಸಲು ಕ್ರಮ ವಹಿಸಿರುವುದು ಕಂಡು ಬಂದಿರುವುದಿಲ್ಲ. ಆದ್ದರಿಂದ, ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ಸ್ (ವಾರ್ಡ್ ಕಮಿಟಿ) ರೂಲ್ಸ್ 2016 ನಿಯಮಗಳಲ್ಲಿ ವಿವರಿಸಿರುವಂತೆ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕೂಡಲೇ ವಾರ್ಡ್ ಕಮಿಟಿಗಳನ್ನು ರಚಿಸಲು ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಈ-ಮೂಲಕ ಸೂಚಿಸಿದೆ.

(ವೈ.ಗೋಪಾಲ್)
ಸರ್ಕಾರದ ಅಧೀನ ಕಾರ್ಯದರ್ಶಿ
(ಮಹಾನಗರಪಾಲಿಕೆ-2 ಮತ್ತು ಸಮನ್ವಯ)
ನಗರಾಭಿವೃದ್ಧಿ ಇಲಾಖೆ


ಗೆ:
(1) ನಿರ್ದೇಶಕರು, ಪೌರಾಡಳಿತ ಇಲಾಖೆ, ಬೆಂಗಳೂರು.
(2) ಆಯುಕ್ತರು, ಮೈಸೂರು, ಹುಬ್ಬಳ್ಳಿ-ಧಾರವಾಡ/ಬೆಳಗಾವಿ/ವಿಜಯಪುರ/ದಾವಣಗೆರೆ/ಶಿವಮೊಗ್ಗ/ಮಂಗಳೂರು/ಕಲಬುರಗಿ/ಬಳ್ಳಾರಿ/ತುಮಕೂರು/ ಮಹಾನಗರ ಪಾಲಿಕೆ.
(3) ಶಾಖಾ ರಕ್ಷಕ ಕಡತ/ಹೆಚ್ಚುವರಿ ಪ್ರತಿ-03

**08-02-2021 ರಂದು ಸುತ್ತೋಲೆ ಹೊರಡಿಸಲಾಗಿದೆ**

## ನಿರ್ದೇಶಕರು,

**ಪೌರಾಡಳಿತ ನಿರ್ದೇಶನಾಲಯ**

**ಕರ್ನಾಟಕ ಸರ್ಕಾರ**



ಮಾಹಿತಿ ಹಕ್ಕು ಅಧಿನಿಯಮ -2005ರಡಿ ಮಾಹಿತಿ ನೀಡಲಾಗಿದೆ.

ದೂರವಾಣಿ: 22353942
22035079
ಫ್ಯಾಕ್ಸ್: 22250318

ಅ.ಸ. ಪತ್ರ ಸಂಖ್ಯೆ: ನಅಇ 18 ಎಂಎನ್‌ಜಿ 2019

ದಿನಾಂಕ 19-06-2019

[illegible]

518034

25 JUN 2019

[illegible]

**16-07-2022 ರಂದು ಸುತ್ತೋಲೆ ಹೊರಡಿಸಲಾಗಿದೆ**

## ಅಜಯ್ ನಾಗಭೂಷಣ್, ಐ.ಎ.ಎಸ್

**ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ**

**ಕರ್ನಾಟಕ ಸರ್ಕಾರ**

# ಸಾರ್ವಜನಿಕ ಹಿತಾಸಕ್ತಿ ಪ್ರಕರಣಗಳಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ನೀಡಿದ ಆದೇಶದ ಮೇರೆಗೆ ಬೆಂಗಳೂರು ಮತ್ತು ಮಂಗಳೂರು ಮಹಾನಗರಗಳಲ್ಲಿ ವಾರ್ಡ್ ಸಮಿತಿ ರಚಿಸಲ್ಪಟ್ಟಿವೆ.

ತಡವಾಗಿಯೇ ಸರಿ, ನಾಗರಿಕರು ಮತ್ತು ನಾಗರಿಕ ಸಮಾಜ ಸಂಸ್ಥೆಗಳು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಪ್ರತಿಫಲವಾಗಿ ಬೆಂಗಳೂರು ಮತ್ತು ಮಂಗಳೂರಿನಲ್ಲಿ ವಾರ್ಡ್ ಸಮಿತಿಗಳನ್ನು ರಚಿಸಲ್ಪಟ್ಟವು. ಆದರೆ, ಮೈಸೂರಿನ ಪ್ರಕರಣದಲ್ಲಿ ನ್ಯಾಯಾಲಯದ ಆದೇಶವನ್ನು ಪಾಲಿಕೆಯು ಪಾಲಿಸಿಲ್ಲ

**2012**
**ಬೆಂಗಳೂರು**
PIL WP24739/2012

- ಮೂಲದಲ್ಲಿಯೇ ಘನತ್ಯಾಜ್ಯವನ್ನು ಪ್ರತ್ಯೇಕಿಸುವ ಪ್ರಕ್ರಿಯೆ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂ. WP24739/2012 ರ ಪ್ರಕರಣದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದನಿರ್ದೇಶನಗಳನ್ವಯ ವಾರ್ಡ್ ಸಮಿತಿಗಳನ್ನು ರಚಿಸಲಾಯಿತು
- ವಾರ್ಡ್ ಸಮಿತಿಗಳು ಜನವರಿ 2019 ರಿಂದ ಕಾರ್ಯನಿರ್ವಹಿಸಲು ಪ್ರಾರಂಭಿಸಿದವು
- ಏರಿಯಾ ಸಭಾಗಳು ಇನ್ನೂ ಕಾರ್ಯಾರಂಭ ಮಾಡಿಲ್ಲ
- ಬಿಬಿಎಂಪಿಯು ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳ ಉಪನಿಯಮಗಳನ್ನು ಇನ್ನೂ ಪ್ರಕಟಿಸಿಲ್ಲ

---

**2019**
**ಮಂಗಳೂರು**
PIL WP53244/2019

- ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂ. WP53244/2019 ರ ಪ್ರಕರಣದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದನಿರ್ದೇಶನಗಳನ್ವಯ ಫೆ 2022 ವಾರ್ಡ್ ಸಮಿತಿಗಳನ್ನು ರಚಿಸಲಾಯಿತು
- ವಾರ್ಡ್ ಸಮಿತಿಗಳು ಏಪ್ರಿಲ್ 2022 ರಿಂದ ಕಾರ್ಯನಿರ್ವಹಿಸಲು ಪ್ರಾರಂಭಿಸಿದವು
- ಏರಿಯಾ ಸಭಾಗಳು ಇನ್ನೂ ಕಾರ್ಯಾರಂಭ ಮಾಡಿಲ್ಲ
- ಮಂಗಳೂರು ಮಹಾನಗರ ಪಾಲಿಕೆಯು ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳ ಉಪನಿಯಮಗಳನ್ನು ಇನ್ನೂ ಅಂಗೀಕರಿಸಿಲ್ಲ

---

**2021**
**ಮೈಸೂರು**
PIL WP3506/2021

- ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂ. WP3506/2021 ರ ಪ್ರಕರಣದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ಮೈಸೂರು ಮಹಾನಗರ ಪಾಲಿಕೆಗೆ ವಾರ್ಡ್ ಸಮಿತಿಗಳನ್ನು ರಚಿಸುವಂತೆ ಹಾಗು ಕರ್ನಾಟಕ ಸರ್ಕಾರಕ್ಕೆ ಏರಿಯಾ ಸಭಾಗಳನ್ನು ರಚಿಸುವಂತೆ ಮತ್ತು ಅವುಗಳನ್ನು ಕಾರ್ಯಗತಗೊಳಿಸುವುದಕ್ಕೆ ಉಪನಿಯಮಗಳನ್ನು ಪ್ರಕಟಿಸುವಂತೆ ಆದೇಶ ಹೊರಡಿಸಿದೆ. ಆದರೆ ವಾರ್ಡ್ ಸಮಿತಿಗಳು ಇನ್ನೂ ರಚನೆಗೊಂಡಿರುವುದಿಲ್ಲ
- ಏರಿಯಾ ಸಭಾಗಳು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ (ಕರ್ನಾಟಕ ಸರ್ಕಾರವು ಏರಿಯಾ ಸಭಾಗಳನ್ನು ರಚಿಸಿ ಅಧಿಸೂಚನೆ ಹೊರಡಿಸಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಯಾವುದೇ ಮಾಹಿತಿ ಲಭ್ಯವಿಲ್ಲ)
- ಮೈಸೂರು ಮಹಾನಗರ ಪಾಲಿಕೆಯು ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳ ಉಪನಿಯಮಗಳನ್ನು ಇನ್ನೂ ಅಂಗೀಕರಿಸಿಲ್ಲ

# ಕರ್ನಾಟಕ ವಾರ್ಡ್ ಸಮಿತಿ ಬಳಗದ ರಚನೆ, ಕಾರ್ಯ ಮತ್ತು ನಗರಗಳಲ್ಲಿ ವಾರ್ಡ್ ಸಮಿತಿಗಳನ್ನು ಸ್ಥಾಪಿಸಲು, ಬಲಪಡಿಸುವಲ್ಲಿ ಬಳಗದ ಪ್ರಯತ್ನಗಳು

# ನಾಗರಿಕ ಸಹಭಾಗಿತ್ವವನ್ನು ಸಾಂಸ್ಥಿಕಗೊಳಿಸಲು ಕರ್ನಾಟಕ ವಾರ್ಡ್ ಸಮಿತಿ ಬಳಗದ ಕಾರ್ಯಾಚರಣೆ

- 2022 ರಲ್ಲಿ ಜನಾಗ್ರಹ ಸಂಸ್ಥೆಯ ನೇತೃತ್ವದಲ್ಲಿ ಸಕ್ರಿಯ ನಾಗರಿಕರ ಒಕ್ಕೂಟದ ರಚನೆ
- ನಗರ ಪಾಲಿಕೆಗಳಲ್ಲಿ ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳನ್ನು ರಚಿಸಲು ಮತ್ತು ಬಲಪಡಿಸಲು ನಗರ ಸರ್ಕಾರಗಳೊಂದಿಗೆ ಕೈಜೋಡಿಸಿ ಕೆಲಸ ಮಾಡಲಾಗುತ್ತಿದೆ
- ರಾಜ್ಯದ ನಗರ ಪ್ರದೇಶದ ಜನಸಂಖ್ಯೆಯ ಸರಿಸುಮಾರು ಶೇ. 20 ರಷ್ಟು ಜನರನ್ನು ಬಳಗವು ಚಟುವಟಿಕೆಗಳ ಮೂಲಕ ತಲುಪಿದ್ದಾರೆ

**ಬಳಗದ ಉದ್ದೇಶಗಳು:**

- ವಾರ್ಡ್ ಸಮಿತಿಗಳನ್ನು ರಚಿಸುವುದು/ ಬಲಪಡಿಸುವುದು
- ನೆರೆಹೊರೆಯ ಜೀವನದ ಗುಣಮಟ್ಟವನ್ನು ಸುಧಾರಿಸುವುದು
- ವಾರ್ಡ್ ಸಮಿತಿ ಸಭೆಗಳಲ್ಲಿ ನಾಗರಿಕರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು
- ವಾರ್ಡ್ ಸಮಿತಿ ಸದಸ್ಯತ್ವಕ್ಕಾಗಿ ನಾಗರಿಕರನ್ನು ಸಜ್ಜುಗೊಳಿಸಿ ಅರ್ಜಿಗಳನ್ನು ಹೆಚ್ಚಿಸುವುದು
- ಸ್ಥಳೀಯ ನಾಗರೀಕ ಸಮಸ್ಯೆಗಳ ಕುರಿತು ಸಮಾಲೋಚಿಸುವುದು
- ವಾರ್ಡ್ ಸಮಿತಿ ಸಭೆಗಳ ಸ್ಥಿತಿಗತಿ ಮತ್ತು ಪ್ರಗತಿಯ ಪರಿಶೀಲನೆ ನಡೆಸುವುದು ಮತ್ತು ಪೌರ ಸಂಸ್ಥೆಗಳಿಗೆ ಇವುಗಳ ಹೆಚ್ಚು ಪರಿಣಾಮಕಾರಿ ಅನುಷ್ಠಾನಕ್ಕೆ ಸಲಹೆಗಳನ್ನು ಒದಗಿಸುವುದು

**ಬಳಗದ ಸದಸ್ಯರು ಮೂರು ಹಂತದಲ್ಲಿ ಸಂಘಟಿತರಾಗಿದ್ದರೆ:**

**ಸಕ್ರಿಯ ನಾಗರೀಕ**

- ಪ್ರತಿ ವಾರ್ಡಿನ ಆಸಕ್ತ ನಾಗರಿಕರು ನಾಗರಿಕರ ಭಾಗವಹಿಸುವಿಕೆಯನ್ನು ಸಾಂಸ್ಥಿಕಗೊಳಿಸಲು ಮತ್ತು ಜೀವನದ ಗುಣಮಟ್ಟವನ್ನು ಸುಧಾರಿಸಲು ಒಗ್ಗೂಡುತ್ತಾರೆ

**ನಗರ ಮಟ್ಟದ ಸಮನ್ವಯ ಸಮಿತಿಗಳು**

- ಆಯಾ ನಗರಗಳಲ್ಲಿ ವಾರ್ಡ್ ಸಮಿತಿಗಳ ರಚನೆಯನ್ನು ಉತ್ತೇಜಿಸಲು ನಗರ ಮಟ್ಟದ ಸಮಿತಿಗಳು

**ರಾಜ್ಯ ಮಟ್ಟದ ಸಮನ್ವಯ ಸಮಿತಿ**

- ರಾಜ್ಯಾದ್ಯಂತ ವಾರ್ಡ್ ಸಮಿತಿಗಳ ರಚನೆ ಮತ್ತು ಸ್ಥಿತಿಗತಿಯನ್ನು ಮೇಲ್ವಿಚಾರಣೆ ಮಾಡುವುದರ ಮೂಲಕ ಪ್ರತಿ ನಗರಗಳ ಬಳಗದ ಸಂಚಾಲಕರು ಮತ್ತು ಸಹ ಸಂಚಾಲಕರ ಜೊತೆ ಸಭೆ ನಡೆಸುತ್ತಾರೆ

---

11 ಮಹಾನಗರ ಪಾಲಿಕೆಗಳ ಬಳಗದ ಸಂಚಾಲಕರೊಂದಿಗೆ ಪ್ರಥಮ ಕರ್ನಾಟಕ ವಾರ್ಡ್ ಸಮಿತಿ ಬಳಗ ಸಮಾವೇಶವನ್ನು 18ನೇ ಸೆಪ್ಟೆಂಬರ್ 2022 ರಂದು ಮತ್ತು ಎರಡನೇ ಕರ್ನಾಟಕ ವಾರ್ಡ್ ಸಮಿತಿ ಬಳಗ ಸಮಾವೇಶವನ್ನು 04 ಫೆಬ್ರವರಿ 2024 ರಂದು ನಡೆಸಲಾಯಿತು

# ಕರ್ನಾಟಕ ವಾರ್ಡ್ ಸಮಿತಿ ಬಳಗ: ರಾಜ್ಯ ಮಟ್ಟದ ಹಕ್ಕೊತ್ತಾಯ ಮತ್ತು ಕಾರ್ಯಾಚರಣೆ





- ಕರ್ನಾಟಕದ ವಿವಿಧ ನಗರಗಳಿಂದ ನಾಗರಿಕರು ಒಟ್ಟುಗೂಡಿ ವಾರ್ಡ್ ಸಮಿತಿ ಬಳಗ ಎಂಬ ಸಕ್ರಿಯ ನಾಗರಿಕರ ಒಕ್ಕೂಟವನ್ನು ರಚಿಸಿದ್ದಾರೆ
- ನಗರ ಮಟ್ಟದಲ್ಲಿ ವಾರ್ಡ್ ಸಮಿತಿಗಳನ್ನು ರೂಪಿಸುವ ಮತ್ತು ಬಲಪಡಿಸುವ ಕುರಿತು ನಿಯಮಿತವಾಗಿ ಸಭೆಗಳನ್ನು ನಡೆಸುತ್ತವೆ
- ವಾರ್ಡ್ ಸಮಿತಿಗಳನ್ನು ರಚಿಸಲು ಮಹಾನಗರ ಪಾಲಿಕೆಗಳನ್ನು ಬದ್ಧಗೊಳಿಸಲು ಸ್ಥಳೀಯ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರ ಮೂಲಕ ಬಳಗವು ಪತ್ರ ಅಭಿಯಾನವನ್ನು ಕೈಗೊಂಡಿದೆ
- ಜನತಾ ದರ್ಶನಗಳ ಸಮಯದಲ್ಲಿ ಬಳಗವು ಆಯಾ ಜಿಲ್ಲಾ ಉಸ್ತುವಾರಿ ಸಚಿವರನ್ನು ಭೇಟಿಯಾಗಿ ವಾರ್ಡ್ ಸಮಿತಿಗಳನ್ನು ರಚಿಸುವಂತೆ ಒತ್ತಾಯಿಸಿತು.
- ಬಳಗವು ಮಂಗಳೂರು ಮಹಾನಗರ ಪಾಲಿಕೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಡೆಯುವ ವಾರ್ಡ್ ಸಮಿತಿ ಸಭೆಗಳ ಸ್ಥಿತಿಗತಿ ಮತ್ತು ಪ್ರಗತಿಯ ಪರಿಶೀಲನೆ ಮಾಡುತ್ತದೆ
- ನಾಗರೀಕ ಸೌಕರ್ಯಗಳ ಸಮೀಕ್ಷೆ, ಜಾಗೃತಿ ಅಭಿಯಾನ ಮತ್ತು ಸ್ವಚ್ಛತಾ ಅಭಿಯಾನಗಳ ಮೂಲಕ ಪರಿಸರ ಸಂರಕ್ಷಣೆಯಂತಹ ನಾಗರಿಕ ಚಟುವಟಿಕೆಗಳಲ್ಲಿ ಬಳಗವು ತೊಡಗಿಸಿಕೊಂಡಿದೆ

# ಬೆಂಗಳೂರು ಮಹಾನಗರದಲ್ಲಿ ಪಾಕ್ಷಿಕ ವಾರ್ಡ್ ಸಮಿತಿ ಸಭೆಗಳ ಸ್ಥಿತಿಗತಿ

## 7145

ಬಿಬಿಎಂಪಿ ವಾರ್ಡ್‌ಗಳಾದ್ಯಂತ 2019-2024 ರ ನಡುವೆ ನಡೆಸಲಾದ ವಾರ್ಡ್ ಸಮಿತಿ ಸಭೆಗಳ ಒಟ್ಟು ಸಂಖ್ಯೆ




- ಗಮನಿಸಬೇಕಾದ ಅಂಶವೆಂದರೆ, ಬಿಬಿಎಂಪಿ ವಾರ್ಡ್‌ಗಳು ಎರಡು ಬಾರಿ ಪುನರ್ವಿಂಗಡಣೆಗೆ ಒಳಗಾದವು: ಮೊದಲ ಬಾರಿಗೆ 2022 ರಲ್ಲಿ ಮತ್ತು ನಂತರ 2024 ರಲ್ಲಿ. ಆದ್ದರಿಂದ, ಮೌಲ್ಯಮಾಪನಕ್ಕೆ ಪರಿಗಣಿಸಲಾದ ವಾರ್ಡ್‌ಗಳ ಸಂಖ್ಯೆ ಭಿನ್ನವಾಗಿದೆ, 2022 ರಲ್ಲಿ 232 ವಾರ್ಡ್‌ಗಳು ಮತ್ತು 2024 ರಲ್ಲಿ 225 ವಾರ್ಡ್‌ಗಳು ಇದ್ದವು

- ಬಿಬಿಎಂಪಿ ವಾರ್ಡ್‌ಗಳಲ್ಲಿ ವಾರ್ಡ್ ಸಮಿತಿ ಸಭೆಗಳ ಮೌಲ್ಯಮಾಪನವು ಜನವರಿ 2019 ರಿಂದ ಜುಲೈ 2024 ರವರೆಗಿನ ಅವಧಿಯನ್ನು ಒಳಗೊಂಡಿದೆ. (ಕ್ಯಾಲೆಂಡರ್ ವರ್ಷ - ಜನವರಿಯಿಂದ ಡಿಸೆಂಬರ್ ವರೆಗೆ - ಪರಿಗಣಿಸಲಾಗಿದೆ)


- ಕೋವಿಡ್-19 ಸಾಂಕ್ರಾಮಿಕ ರೋಗದ ಸಮಯದಲ್ಲಿ ಸಾರ್ವಜನಿಕ ಆರೋಗ್ಯ ನಿರ್ವಹಣೆ ಮತ್ತು ವೈದ್ಯಕೀಯ ಹಾಗೂ ಅತ್ಯಾವಶ್ಯಕ ಸಹಾಯವನ್ನು ಕೊನೆಯ ವ್ಯಕ್ತಿಯವರೆಗೆ ತಲುಪಿಸುವಲ್ಲಿ ಬಿಬಿಎಂಪಿಯು ವಾರ್ಡ್ ಸಮಿತಿಗಳ ಮೌಲ್ಯವನ್ನು ಅರಿತುಕೊಂಡಿತು ಎಂದು ಅಧ್ಯಯನದಲ್ಲಿ ಕಂಡು ಬರುತ್ತದೆ

| ವರ್ಷ | ವಾರ್ಡ್ | ಅವಧಿ | ನಿಯಮಾವಳಿ ಪ್ರಕಾರ ಒಟ್ಟು ನಡೆಯಬೇಕಾದ ಸಭೆಗಳು | ನಡೆಸಲಾದ ಒಟ್ಟು ವಾರ್ಡ್ ಸಮಿತಿ ಸಭೆಗಳ ಸಂಖ್ಯೆ | ತಿಂಗಳಿಗೆ ನಡೆದ ಸರಾಸರಿ ಸಭೆಗಳು | ನಡೆದ ಸಭೆಗಳು ಶೇಕಡಾವಾರಿನಲ್ಲಿ |
|---|---|---|---|---|---|---|
| 2019 | 198 | ಜನವರಿ-ಡಿಸೆಂಬರ್ | 2376 | 959 | 74 | 40 |
| 2020 | 198 | ಜನವರಿ-ಜುಲೈ | 1386 | 290 | 41 | 21 |
| 2020 | 198 | ಆಗಸ್ಟ್-ಡಿಸೆಂಬರ್ | 1980 | 891 | 178 | 45 |
| 2021 | 198 | ಜನವರಿ-ಡಿಸೆಂಬರ್ | 4752 | 2116 | 176 | 45 |
| 2022 | 198 | ಜನವರಿ-ಏಪ್ರಿಲ್ | 1584 | 524 | 131 | 33 |
| 2022 | 243 | ಸೆಪ್ಟೆಂಬರ್ -ಡಿಸೆಂಬರ್ | 1856 | 1553 | 388 | 84 |
| 2023 | 243 | ಜನವರಿ-ಡಿಸೆಂಬರ್ | 5568 | 752 | 63 | 14 |
| 2024 | 225 | ಜನವರಿ-ಜುಲೈ | 3150 | 60 | 20 | 2 |
| | | ಒಟ್ಟು | 22652 | 7145 | 1072 | 32 |

# ಮಂಗಳೂರು ಮಹಾನಗರದಲ್ಲಿ ಮಾಸಿಕ ವಾರ್ಡ್ ಸಮಿತಿ ಸಭೆಗಳ ಸ್ಥಿತಿಗತಿ

**489**

ಬಿಬಿಎಂಪಿ ವಾರ್ಡ್‌ಗಳಾದ್ಯಂತ **2019-2024** ರ ನಡುವೆ ನಡೆಸಲಾದ ವಾರ್ಡ್ ಸಮಿತಿ ಸಭೆಗಳ ಒಟ್ಟು ಸಂಖ್ಯೆ





| ವರ್ಷ | ವಾರ್ಡ್ | ಅವಧಿ | ನಿಯಮಾವಳಿ ಪ್ರಕಾರ ಒಟ್ಟು ನಡೆಯಬೇಕಾದ ಸಭೆಗಳು | ನಡೆಸಲಾದ ಒಟ್ಟು ವಾರ್ಡ್ ಸಮಿತಿ ಸಭೆಗಳ ಸಂಖ್ಯೆ | ತಿಂಗಳಿಗೆ ನಡೆದ ಸರಾಸರಿ ಸಭೆಗಳು | ನಡೆದ ಸಭೆಗಳು ಶೇಕಡಾವಾರಿನಲ್ಲಿ |
|---|---|---|---|---|---|---|
| 2022 | 60 | ಏಪ್ರಿಲ್-ಡಿಸೆಂಬರ್ | 540 | 290 | 32 | 54 |
| 2023 | 60 | ಜನವರಿ-ಡಿಸೆಂಬರ್ | 720 | 156 | 13 | 22 |
| 2024 | 60 | ಜನವರಿ-ಜುಲೈ | 420 | 43 | 14 | 10 |
| | | ಒಟ್ಟು | 1680 | 489 | 60 | 29 |



# ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳಿಗೆ ಸಂಬಂಧಿಸಿದಂತೆ ಚುನಾಯಿತ ಪ್ರತಿನಿಧಿಗಳ ಶಿಫಾರಸ್ಸುಗಳು

# ಚುನಾಯಿತ ಪ್ರತಿನಿಧಿಗಳಿಂದ ಆಯ್ದ ಶಿಫಾರಸ್ಸು ಪತ್ರಗಳು (1/4)



प्रल्हाद जोशी
PRALHAD JOSHI
ಪ್ರಲ್ಹಾದ ಜೋಶಿ

संसदीय कार्य, कोयला एवं खान मंत्री
भारत सरकार
नई दिल्ली
MINISTER OF PARLIAMENTARY AFFAIRS,
COAL AND MINES
GOVERNMENT OF INDIA
NEW DELHI

D.O.No. M(M/C & PA)/2023-24/1168 ದಿನಾಂಕ: 30-08-2023

ಡಾ. ಈಶ್ವರ ಉಳ್ಳಾಗಡ್ಡಿ ಅವರೇ,

ವಿಷಯ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನಾಗರೀಕ ವಾರ್ಡ್ ಸಮಿತಿ ರಚನೆ ಮಾಡುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಹುಬ್ಬಳ್ಳಿ-ಧಾರವಾಡ ವಾರ್ಡ್ ಸಮಿತಿ ಬಳಗದ ಅಧ್ಯಕ್ಷರಾದ ಶ್ರೀ ಲಿಂಗರಾಜ ಧಾರವಾಡ ಶೆಟ್ಟರ ಇವರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನಾಗರೀಕರ ವಾರ್ಡ್ ಸಮೀತಿ ರಚನೆ ಮಾಡುವಂತೆ ಮನವಿ ಸಲ್ಲಿಸಿರುವರು. (ಮನವಿ ಲಗತ್ತಿಸಲಾಗಿದೆ)

ಕಾರಣ ಸದರಿ ವಿಷಯವನ್ನು ಪರಿಶೀಲಿಸಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನಾಗರೀಕರ ವಾರ್ಡ್ ಸಮೀತಿ ರಚನೆ ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರುವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
(ಪ್ರಲ್ಹಾದ ಜೋಶಿ)


ಡಾ. ಈಶ್ವರ ಉಳ್ಳಾಗಡ್ಡಿ ಕೆ.ಎ.ಎಸ್.
ಆಯುಕ್ತರು,
ಹು-ಧಾರವಾಡ ಮಹಾನಗರ ಪಾಲಿಕೆ,
ಹುಬ್ಬಳ್ಳಿ

Office : Room No. 15, Parliament House, New Delhi-110001, Tel : 011-23017780, 23017798, 23018729, Fax : 011-23792341
Office : Room No. 353, 'A' Wing, 3rd Floor, Shastri Bhawan, New Delhi, Tel : 23387277, 23383109, 23386402
Residence : 11 Akbar Road, New Delhi-110001, Tel : 011-23014097, 23094098,
H. No. 122-D, 'Kamitartha' Mayuri Estate, Keshwapur, Hubli-580023 (Karnataka)
Tel. No. : 0836-2251055, 2258955, E-mail : pralhadvjoshi@gmail.com, officeofpralhadjoshiji@gmail.com



## ಶ್ರೀ ಪ್ರಲ್ಹಾದ ಜೋಶಿ

ಸಂಸದೀಯ ವ್ಯವಹಾರಗಳ, ಕಲ್ಲಿದ್ದಲು ಮತ್ತು ಗಣಿ ಸಚಿವರು,
ಭಾರತ ಸರ್ಕಾರ



ಬಸವರಾಜ ಎಸ್. ಹೊರಟ್ಟಿ
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು
BASAVARAJA S. HORATTI
Chairman
Karnataka Legislative Council

Off: Tel : 2225 9112
2225 8575
2203 3325
Fax : 2225 2068
ಕೊಠಡಿ ಸಂಖ್ಯೆ: 117, ಒಂದನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560 001
Room No. 117, 1st Floor
Vidhana Soudha, Bengaluru - 560 001
E-mail : chairmanklc.uh@gmail.com

ಸಂಖ್ಯೆ:ಸಕಾಹು: 390 :2023 ದಿನಾಂಕ: 13-09-2023

ಟಿಪ್ಪಣಿ

ಸಂಚಾಲಕರು, ಹುಬ್ಬಳ್ಳಿ-ಧಾರವಾಡ ವಾರ್ಡ ಸಮಿತಿ ಬಳಗ, ಹುಬ್ಬಳ್ಳಿ, ಇವರು ಭಾರತದ ಸಂವಿಧಾನದ 74ನೇ ತಿದ್ದುಪಡಿ ಮತ್ತು ಕೆಎಂಸಿ ಆಕ್ಟ ಕಲಂ 13.ಎಚ್ ಪ್ರಕಾರ ಮಹಾನಗರ ಪಾಲಿಕೆಯು ನಾಗರಿಕರ ವಾರ್ಡ ಸಮಿತಿಗಳನ್ನು ರಚಿಸುವುದು ಕಡ್ಡಾಯವಾಗಿದ್ದು, ಈ ದಿಶೆಯಲ್ಲಿ ಪಾಲಿಕೆಯ ಇತ್ತೀಚಿನ ಸರ್ವಾನುಮತದ ನಿರ್ಣಯದಂತೆ ಇದೇ ಆಗಷ್ಟ 15ರ ಒಳಗೆ ವಾರ್ಡ ಸಮಿತಿ ರಚಿಸಬೇಕಾಗಿತ್ತು, ಆದರೆ ಈ ಪ್ರಕ್ರಿಯೇ ಅನುಷ್ಠಾನಗೊಳ್ಳದೆ ವಿಳಂಬವಾಗಿದೆ. ಆದ್ದರಿಂದ ಸದರಿ ಸಮಿತಿಯನ್ನು ರಚಿಸಲು ಆದ್ಯತೇಯ ಮೇರೆಗೆ ಕ್ರಮಕೈಗೊಳ್ಳುವಂತೆ ಮನವಿ ಸಲ್ಲಿಸಿರುತ್ತಾರೆ.

ಮುಂದುವರೆದು ಸದರಿಯವರ ಮನವಿಯನ್ನು ಪರಿಗಣಿಸಿ. ಶಾಸನಾತ್ಮಕವಾಗಿ ಕಡ್ಡಾಯವಾದ ಮಹಾನಗರ ಪಾಲಿಕೆಯ ನಾಗರಿಕರ ವಾರ್ಡ ಸಮಿತಿಗಳನ್ನು ರಚಿಸಲು ಅತೀ ತುರ್ತಾಗಿ ಅಗತ್ಯ ಕ್ರಮಕೈಗೊಳ್ಳಲು ಕೋರುತ್ತೇನೆ.


(ಬಸವರಾಜ ಹೊರಟ್ಟಿ)

ಆಯುಕ್ತರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಹುಬ್ಬಳ್ಳಿ.



## ಶ್ರೀ ಬಸವರಾಜ ಎಸ್ ಹೊರಟ್ಟಿ

ಸಭಾಪತಿಗಳು,
ಕರ್ನಾಟಕ ವಿಧಾನ ಪರಿಷತ್ತು



ಸಂತೋಷ್ ಎಸ್ ಲಾಡ್
ಕಾರ್ಮಿಕ ಸಚಿವರು ಹಾಗೂ
ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ: 342, 342ಎ
3ನೇ ಮಹಡಿ, ವಿಧಾನಸೌಧ,
ಬೆಂಗಳೂರು-560 001
ದೂರವಾಣಿ: 080-22253751, 22033413

ಸಂ.ಕಾಸಕ/ 1091 /2023

ದಿನಾಂಕ: 18.8.2023

ಟಿಪ್ಪಣಿ

ಶ್ರೀ ಲಿಂಗರಾಜ ಧಾರವಾಡ ಶೆಟ್ಟರ್, ಸಂಚಾಲಕರು, ಹುಬ್ಬಳ್ಳಿ ಧಾರವಾಡ ನಾಗರಿಕರ ವಾರ್ಡ್ ಸಮಿತಿ ಬಳಗ, ನಂ.57, ಶ್ರೇಯಾ ಪಾರ್ಕ್, ಗೋಕುಲ ರಸ್ತೆ, ಹುಬ್ಬಳ್ಳಿ-30 ಇವರು ಸಲ್ಲಿಸಿರುವ ದಿನಾಂಕ 13.8.2023ರ ಮನವಿಯನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಮನವಿಯಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿ ರಚನೆ ಪ್ರಕ್ರಿಯೆ ಸಂಪೂರ್ಣಗೊಳಿಸಲು ಕೋರಿರುತ್ತಾರೆ.

ಅದರಂತೆ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿ ರಚನೆ ಪ್ರಕ್ರಿಯೆ ಸಂಪೂರ್ಣಗೊಳಿಸಲು ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಿ, ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಕೋರಿದೆ.

ಸಹಿ/-
(ಸಂತೋಷ್ ಎಸ್ ಲಾಡ್)

ಆಯುಕ್ತರು,
ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ,
ಹುಬ್ಬಳ್ಳಿ.


ಪ್ರತಿ ಮಾಹಿತಿಗಾಗಿ: ಶ್ರೀ ಲಿಂಗರಾಜ ಧಾರವಾಡ ಶೆಟ್ಟರ್, ಸಂಚಾಲಕರು, ಹುಬ್ಬಳ್ಳಿ ಧಾರವಾಡ ನಾಗರಿಕರ ವಾರ್ಡ್ ಸಮಿತಿ ಬಳಗ, ನಂ.57, ಶ್ರೇಯಾ ಪಾರ್ಕ್, ಗೋಕುಲ ರಸ್ತೆ, ಹುಬ್ಬಳ್ಳಿ-30.

(ಸಂತೋಷ್ ಎಸ್ ಲಾಡ್)



# ಶ್ರೀ ಸಂತೋಷ ಎಸ್ ಲಾಡ್

ಕಾರ್ಮಿಕ ಸಚಿವರು ಮತ್ತು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ



JAGADISH SHETTAR
Former Chief Minister
Member, Karnataka Legislative Council

Madhura Estate,
Keshwapur,
Hubballi-580023.
Tel. : 0836-2288844

No. 477/2023.

Date: 28/08/2023.

ಮಾನ್ಯರೇ,

ಸಂಚಾಲಕರು, ಹುಬ್ಬಳ್ಳಿ-ಧಾರವಾಡ ವಾರ್ಡ ಸಮಿತಿ ಬಳಗ, ಹುಬ್ಬಳ್ಳಿ, ಇವರು ಮನವಿಯೊಂದನ್ನು ಸಲ್ಲಿಸಿ, ಭಾರತದ ಸಂವಿಧಾನದ 74ನೇ ತಿದ್ದುಪಡಿ ಮತ್ತು ಕೆಎಂಸಿ ಆಕ್ಟ್ ಕಲಂ 13ಎಚ್ ಪ್ರಕಾರ ಮಹಾನಗರ ಪಾಲಿಕೆಯು ನಾಗರಿಕರ ವಾರ್ಡ ಸಮಿತಿಗಳನ್ನು ರಚಿಸುವುದು ಕಡ್ಡಾಯವಾಗಿದ್ದು, ಈ ದಿಶೆಯಲ್ಲಿ ಪಾಲಿಕೆಯ ಇತ್ತೀಚಿನ ಸರ್ವಾನುಮತದ ನಿರ್ಣಯದಂತೆ ಇದೇ ಅಗಸ್ಟ 15ರ ಒಳಗೆ ವಾರ್ಡ ಸಮಿತಿ ರಚಿಸಬೇಕಾಗಿತ್ತು. ಆದರೆ, ಈ ಪ್ರಕ್ರಿಯೆ ಅನುಷ್ಠಾನಗೊಳ್ಳದೆ ವಿಳಂಬವಾಗಿದೆ. ಆದ್ದರಿಂದ, ಸದರಿ ಸಮಿತಿಯನ್ನು ರಚಿಸಲು ಆದ್ಯತೆಯ ಮೇರೆಗೆ ತ್ವರಿತ ಕ್ರಮ ಕೈಗೊಳ್ಳಲು ಮನವಿ ಸಲ್ಲಿಸಿರುತ್ತಾರೆ.

ಕಾರಣ, ಸದರಿಯವರ ಮನವಿಯನ್ನು ಪರಿಗಣಿಸಿ, ಶಾಸನಾತ್ಮಕವಾಗಿ ಕಡ್ಡಾಯವಾದ ಮಹಾನಗರ ಪಾಲಿಕೆಯ ನಾಗರಿಕರ ವಾರ್ಡ ಸಮಿತಿಗಳನ್ನು ರಚಿಸಲು ತುರ್ತು ಕ್ರಮ ಕೈಗೊಳ್ಳಲು ಕೋರಿದೆ.


(ಜಗದೀಶ ಶೆಟ್ಟರ)

ಮಾನ್ಯ ಆಯುಕ್ತರು,
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ,
ಹುಬ್ಬಳ್ಳಿ.



# ಶ್ರೀ ಜಗದೀಶ್ ಶೆಟ್ಟರ್

ವಿಧಾನ ಪರಿಷತ್ ಸದಸ್ಯರು ಮತ್ತು
ಮಾಜಿಕರ್ನಾಟಕದ ಮಾಜಿ ಮುಖ್ಯಮಂತ್ರಿಗಳು



ವಿನಯ ಕುಲಕರ್ಣಿ
ಶಾಸಕರು,
ಧಾರವಾಡ-71, ವಿಧಾನಸಭಾ ಕ್ಷೇತ್ರ,
ಜಿಲ್ಲೆ : ಧಾರವಾಡ, ರಾಜ್ಯ : ಕರ್ನಾಟಕ

Vinay Kulkarni
MLA
Dharwad -71, Assembly Constituency,
Dist : Dharwad State : Karnataka

ವಿಳಾಸ : ಪ್ಲಾಟ್ ನಂ. 104, ಶಿವಗಿರಿ, ಬಾರಾಕೊಟ್ರಿ, ಕೆ.ಯು.ಡಿ. ರಸ್ತೆ, ಧಾರವಾಡ-580 007    Plot No. 104, Shivagiri, Barakotri, K.U.D. Road, Dharwad-580 007

ಸಂಖ್ಯೆ : MLA/DWD/327/2023-24

ದಿನಾಂಕ : 11/9/2023

ಇವರಿಗೆ,
ಮಾನ್ಯ ಆಯುಕ್ತರು,
ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ,
ಧಾರವಾಡ.

ಮಾನ್ಯರೇ,

ವಿಷಯ : ವಾರ್ಡ ಸಮಿತಿ ರಚನೆ ಮಾಡುವ ಕುರಿತು

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಂಚಾಲಕರು, ಹುಬ್ಬಳ್ಳಿ ಧಾರವಾಡ ನಾಗರಿಕರ ವಾರ್ಡ ಸಮಿತಿ ಬಳಗ, ಹುಬ್ಬಳ್ಳಿ ಇವರು ಮನವಿಯೊಂದನ್ನು ಸಲ್ಲಸಿ ಭಾರತದ ಸಂವಿಧಾನ 74ನೇ ತಿದ್ದುಪಡಿ ಮತ್ತು ಕೆಎಂಸಿ ಆ್ಯಕ್ಟ್ ಪ್ರಕಾರ ಮಹಾನಗರ ಪಾಲಿಕೆಯು ನಾಗರಿಕರ ವಾರ್ಡಗಳನ್ನು ರಚಿಸುವುದು ಕಡ್ಡಾಯವಾಗಿದ್ದು, ಈ ದಿಸೆಯಲ್ಲಿ ಪಾಲಿಕೆಯು ಇತ್ತಿಚ್ಚಿನ ಸರ್ವಾನುಮತದ ನಿರ್ಣಯದಂತೆ ಇದೇ ಅಗಸ್ಟ 15ರ ಒಳಗಾಗಿ ವಾರ್ಡ ಸಮಿತಿ ರಚಿಸಬೇಕಾಗಿದ್ದು, ಈ ಪ್ರಕಿಯೆಯು ಅನುಷ್ಠಾನಗೊಳ್ಳದೆ ವಿಳಂಬವಾಗಿದೆ.ಆದ್ದರಿಂದ ಸದರಿ ಸಮಿತಿಯನ್ನು ರಚಿಸಲು ಆದ್ಯತೆಯ ಮೇರೆಗೆ ತ್ವರಿತ ಕ್ರಮಕೈಗೊಳ್ಳಲು ಮನವಿ ಸಲ್ಲಿಸಿರುತ್ತಾರೆ.

ಕಾರಣ ಸದರಿಯವರ ಮನವಿಯನ್ನು ಪರಿಗಣಿಸಿ ಶಾಸನಾತ್ಮಕವಾಗಿ ಕಡ್ಡಾಯವಾದ ಮಹಾನಗರ ಪಾಲಿಕೆಯ ನಾಗರಿಕರ ವಾರ್ಡ ಸಮಿತಿಗಳನ್ನು ರಚಿಸಲು ತುರ್ತು ಕ್ರಮಕೈಗೊಳ್ಳಲು ಕೋರಿದೆ.


ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
(ವಿನಯ ಕುಲಕರ್ಣಿ)
ಶಾಸಕರು



# ಶ್ರೀ ವಿನಯ್ ಕುಲಕರ್ಣಿ

ಶಾಸಕರು,
ಧಾರವಾಡ ವಿಧಾನಸಭಾ ಕ್ಷೇತ್ರ



ಅರವಿಂದ ಚಂದ್ರಕಾಂತ ಬೆಲ್ಲದ
ಹುಬ್ಬಳ್ಳಿ - ಧಾರವಾಡ ಪಶ್ಚಿಮ ಶಾಸಕರು

Arvind Chandrakanth Bellad
Hubli-Dharwad West M.L.A.

ಕ್ರಸ/ಶಾಸಕರು/ಹು-ಧಾಪ/2022-23/215

ದಿನಾಂಕ: 16-09-2023

ಗೆ,
ಆಯುಕ್ತರು,
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಮಾನ್ಯರೇ,

ಮಾನ್ಯರೇ,

ವಿಷಯ:-ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನಾಗರೀಕರ ವಾರ್ಡ ಸಮಿತಿ ರಚನೆ ಮಾಡುವ ಕುರಿತು.

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಹುಬ್ಬಳ್ಳಿ-ಧಾರವಾಡ ವಾರ್ಡ ಸಮಿತಿ ಬಳಗ, ಹುಬ್ಬಳ್ಳಿ ಇವರು ಮನವಿಯನ್ನು ಸಲ್ಲಿಸಿರುತ್ತಾರೆ. ಸಮಿತಿಯ ಮನವಿದನ್ವಯ ಪಾಲಿಕೆಯ ಇತ್ತೀಚಿನ ಸರ್ವಾನುಮತದ ನಿರ್ಣಯದಂತೆ ಆಗಸ್ಟ 15ರ ಒಳಗೆ ವಾರ್ಡ ಸಮಿತಿ ರಚಿಸಬೇಕಿತ್ತು, ಈ ಪ್ರಕ್ರಿಯೆ ಅನುಷ್ಠಾನಗೊಳ್ಳದೆ ವಿಳಂಬವಾಗುತ್ತಿರುವ ವಿಷಯ ತಿಳಿದು ಬಂದಿರುತ್ತದೆ.

ಕಾರಣ ಸದರಿಯವರ ಮನವಿದನ್ವಯ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನಾಗರೀಕ ವಾರ್ಡ ಸಮಿತಿಯನ್ನು ತುರ್ತಾಗಿ ರಚಿಸಲು ತಮ್ಮಲ್ಲಿ ಈ ಮೂಲಕ ಕೋರಿದೆ.

ವಂದನೆಗಳೊಂದಿಗೆ,


ತಮ್ಮ ವಿಶ್ವಾಸಿ,
Arvind Bellad

Off. : Hubballi-Dharwad Muncipal Corporation, Dharwad. Ph : 0836-2213861
Resi. : "Yoganand", Old Mysore Kirloskar Compond, Gokul Road, Hubballi - 30
www.arvindbellad.com, office@arvindbellad.com



# ಶ್ರೀ ಅರವಿಂದ್ ಸಿ ಬೆಲ್ಲದ್

ಶಾಸಕರು,
ಹುಬ್ಬಳ್ಳಿ-ಧಾರವಾಡ ಪಶ್ಚಿಮ ವಿಧಾನ ಸಭಾ ಕ್ಷೇತ್ರ



ಪ್ರಸಾದ ಅಬ್ಬಯ್ಯ
ಶಾಸಕರು
72 - ಹುಬ್ಬಳ್ಳಿ - ಧಾರವಾಡ ಪೂರ್ವ ವಿಧಾನ ಸಭಾ ಕ್ಷೇತ್ರ

Prasad Abbayya
Member
Karnataka Legislative Assembly

ಕ್ರ.ಸಂ. : ಹುಧಾಪೂ/ವಿಸಸ/ಪಹಿ/226/2023-24

ದಿನಾಂಕ : 08-09-2023

ಇವರಿಗೆ,
ಆಯುಕ್ತರು,
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ,
ಹುಬ್ಬಳ್ಳಿ

ಮಾನ್ಯರೇ,

ವಿಷಯ :ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನಾಗರಿಕರಿಗೆ ವಾರ್ಡ ಸಮಿತಿಗಳನ್ನು ರಚಿಸುವ ಕುರಿತು .
ಉಲ್ಲೇಖ : ಹುಬ್ಬಳ್ಳಿ-ಧಾರವಾಡ ವಾರ್ಡ ಸಮಿತಿ ಬಳಗ ಇವರ ಮನವಿ ಪತ್ರ

---0---

ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಸುಮಾರು 82 ವಾರ್ಡಗಳಿಂದ ಸುಮಾರು 626 ಅರ್ಜಿಗಳನ್ನು ಸಲ್ಲಿಸಲಾಗಿತ್ತು, ಭಾರತದ ಸಂವಿಧಾನದ 74ನೇ ತಿದ್ದುಪಡಿ ಮತ್ತು ಕೆ.ಎಂ.ಸಿ ಆಕ್ಟ್ ಕಲಂ13ಎಚ್ ಪ್ರಕಾರ ಮಹಾನಗರ ಪಾಲಿಕೆಯ ನಾಗರಿಕರ ವಾರ್ಡ ಸಮಿತಿಯನ್ನು ರಚಿಸುವುದು ಕಡ್ಡಾಯವಾಗಿದ್ದು ಈ ದಿಶೆಯಲ್ಲಿ ಪಾಲಿಕೆಯ ಇತ್ತೀಚಿನ ಸಭೆಯಲ್ಲಿ ಸರ್ವಾನುಮತದ ನಿರ್ಣಯದಂತೆ ಆಗಸ್ಟ್-15ರ ಒಳಗೆ ವಾರ್ಡ ಸಮಿತಿ ರಚಿಸಬೇಕಾಗಿರುತ್ತದೆ. ಈ ಪ್ರಕ್ರೀಯ ಅನುಷ್ಠಾನ ಮಾಡಲು ವಿಳಂಬವಾಗಿರುತ್ತದೆ ಎಂದು ಉಲ್ಲೇಖದಲ್ಲಿ ತಿಳಿಸಿರುತ್ತಾರೆ.

ಸದರ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನಾಗರಿಕರಿಗೆ ವಾರ್ಡ ಸಮಿತಿಯನ್ನು ಇಲಾಖೆ ನಿಯಮಾನುಸಾರವಾಗಿ ಸಮಿತಿಗಳನ್ನು ರಚಿಸಿ ನಾಗರಿಕರಿಗೆ ಅನುಕೂಲ ಮಾಡಲು ಈ ಮೂಲಕ ತಮ್ಮಲ್ಲಿ ಕೋರಿದೆ.

ವಂದನೆಗಳೊಂದಿಗೆ


ತಮ್ಮ ವಿಶ್ವಾಸಿ,
(ಪ್ರಸಾದ ಅಬ್ಬಯ್ಯ)
ಶಾಸಕರು

Room No. 503 & 504, 5th Floor, Legislature Bhavan - 2, BENGALURU - 560 001.
Office : No. B-003, H.D.M.C. Campus, HUBBALLI - 580 020. Telefax : 0836 - 2355169, Cell : 96202 45795
Email : mlaprasadabbayya@gmail.com



# ಶ್ರೀ ಪ್ರಸಾದ್ ಅಬ್ಬಯ್ಯ

ಶಾಸಕರು,
ಹುಬ್ಬಳ್ಳಿ-ಧಾರವಾಡ ಪೂರ್ವ
ವಿಧಾನ ಸಭಾ ಕ್ಷೇತ್ರ



ಮಹೇಶ ಟೆಂಗಿನಕಾಯಿ
ಶಾಸಕರು,
ಹುಬ್ಬಳ್ಳಿ-ಧಾರವಾಡ ಕೇಂದ್ರ-73 ಮತಕ್ಷೇತ್ರ
ಧಾರವಾಡ ಜಿಲ್ಲೆ
ಮೊ : 9620667598

Mahesh Tenginkai
MLA
Hubballi-Dharwad Central-73
Constituency, Dharwad Dist.
Whatsapp No. 9916457316

ಕ್ರಮ ಸಂಖ್ಯೆ : ಹು-ಧಾ-ಕೇ/೧೫/೨೦೨೩

ದಿನಾಂಕ : ೨೧/೦೮/೨೦೨೩

ಗೆ,
ಮಾನ್ಯ ಆಯುಕ್ತರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಹುಬ್ಬಳ್ಳಿ

ಮಾನ್ಯರೇ,

ವಿಷಯ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನಾಗರಿಕರ ವಾರ್ಡ್ ಸಮಿತಿ ರಚಿಸುವ ಕುರಿತು.

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಸಂಚಾಲಕರು ಹುಬ್ಬಳ್ಳಿ-ಧಾರವಾಡ ವಾರ್ಡ್ ಸಮಿತಿ ಬಳಗ, ಹುಬ್ಬಳ್ಳಿ ಇವರು ಮನವಿಯೊಂದನ್ನು ಸಲ್ಲಿಸುತ್ತಾ, ಪಾಲಿಕೆಯ ಇತ್ತೀಚಿನ ಸರ್ವಾನುಮತದಿಂದ ನಿರ್ಣಯದಂತೆ ಇದೇ ಆಗಸ್ಟ್-15ರ ಒಳಗೆ ರಚಿಸಬೇಕಾಗಿದ್ದ ವಾರ್ಡ್ ಸಮಿತಿ ಇದುವರೆಗೂ ರಚನೆಯಾಗಿಲ್ಲವೆಂದು ತಿಳಿಸುತ್ತಾ, ಶೀಘ್ರವಾಗಿ ವಾರ್ಡ್ ಸಮಿತಿ ರಚಿಸಲು ವಿನಂತಿಸಿಕೊಂಡಿರುತ್ತಾರೆ.

ಕಾರಣ ಸದರಿಯವರ ಮನವಿಯನ್ನು ಪರಿಗಣಿಸಿ ಶೀಘ್ರವಾಗಿ ವಾರ್ಡ್ ಸಮಿತಿ ರಚಿಸಲು ಕ್ರಮ ಕೈಗೊಳ್ಳಲು ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
(ಮಹೇಶ ಟೆಂಗಿನಕಾಯಿ)

ಖಾಯಂ ವಿಳಾಸ : ಮನೆ ನಂ. 9. ಬಸವೇಶ್ವರ ನಗರ, ಗೋಕುಲ್ ರಸ್ತೆ, ಹುಬ್ಬಳ್ಳಿ - 580030.
Email : maheshtenginkai73@gmail.com
ಶಾಸಕರ ಭವನ - 2, ಕೊಠಡಿ ಸಂಖ್ಯೆ : 178-179, ಬೆಂಗಳೂರು - 560001



# ಶ್ರೀ ಮಹೇಶ ಟೆಂಗಿನಕಾಯಿ

ಶಾಸಕರು,
ಹುಬ್ಬಳ್ಳಿ-ಧಾರವಾಡ ಸೆಂಟ್ರಲ್
ವಿಧಾನ ಸಭಾ ಕ್ಷೇತ್ರ

# ವಿಧಾನ ಪರಿಷತ್ತಿನಲ್ಲಿ ನಗರಾಭಿವೃದ್ಧಿ ಸಚಿವರ ಭರವಸೆ ಯಾವುದೇ ಫಲ ನೀಡಿಲ್ಲ

- 13 ಫೆಬ್ರವರಿ 2024 ರಂದು ಕರ್ನಾಟಕ ವಿಧಾನ ಮಂಡಲದ ಬಜೆಟ್ ಅಧಿವೇಶನದಲ್ಲಿ, ವಿಧಾನ ಪರಿಷತ್ ಸದಸ್ಯರಾದ ಡಾ. ತಳವಾರ ಸಾಬಣ್ಣ ರವರು ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳನ್ನು ರಚಿಸುವಲ್ಲಿನ ವಿಳಂಬದ ಬಗ್ಗೆ ಚುಕ್ಕೆ ಗುರುತಿನ ಪ್ರಶ್ನೆ ಮೂಲಕ ಧ್ವನಿ ಎತ್ತಿದರು

- ಇದಕ್ಕೆ ಪ್ರತಿಕ್ರಿಯಿಸಿದ ನಗರಾಭಿವೃದ್ಧಿ ಸಚಿವರಾದ ಬಿ ಎಸ್ ಸುರೇಶ ರವರು ವಿಳಂಬವಾಗಿರುವುದನ್ನು ಒಪ್ಪಿಕೊಂಡು, ಆದಷ್ಟು ಬೇಗ ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳನ್ನು ರಚಿಸಲು ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು


- ಆದರೆ, ಈ ಭರವಸೆ ನೀಡಿ ಆರು ತಿಂಗಳು ಕಳೆದರೂ ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳು ಇನ್ನೂ ಜಾರಿಗೆ ಬಂದಿಲ್ಲ



# ಅನುಬಂಧ



## ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳಿಗೆ ಸಂಬಂಧಿಸಿದಂತೆ ಸಾಂವಿಧಾನಿಕ ಪ್ರಾಧಿಕಾರಗಳ ಟಿಪ್ಪಣಿಗಳು


REPORT OF THE

FOURTH STATE FINANCE COMMISSION,
KARNATAKA

MAY, 2018

C.G.Chinnaswamy
Chairman

H.D.Amaranathan
Member

Dr.H.Shashidhar, IAS (Rtd)
Member

Fourth State Finance Commission, Karnataka
III Floor, South Block, Khanija Bhavan
Race Course Road, Bengaluru - 560 001.


fourthksfc@gmail.com

# ನಾಲ್ಕನೇ ಕರ್ನಾಟಕ ರಾಜ್ಯ ಹಣಕಾಸು ಆಯೋಗದ ಟಿಪ್ಪಣಿಗಳು

ಸಾರ್ವಜನಿಕ ವೆಚ್ಚದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯು ಆಡಳಿತದ ಮೂಲಾಧಾರವಾಗಿದೆ. ನಾಗರಿಕರು ತಮ್ಮ ಜೀವನದ ಮೇಲೆ ಪರಿಣಾಮ ಬೀರುವ ಪ್ರಮುಖ ವಿಷಯಗಳ ಬಗ್ಗೆ ಸರ್ಕಾರ ತಮ್ಮ ಬಳಿ ಸಮಾಲೋಚಿಸಬೇಕು ಎಂದು ಬಯಸುತ್ತಾರೆ. ನಗರದ ಆಡಳಿತದಲ್ಲಿ ಸಮುದಾಯದ ಸಹಭಾಗಿತ್ವವನ್ನು ಸಾಂಸ್ಥಿಕಗೊಳಿಸುವುದು ದೀರ್ಘ ಕಾಲದಿಂದ ಬಾಕಿಯಿರುವ ಸುಧಾರಣೆಯಾಗಿದೆ. ವಾರ್ಡ್ ಸಮಿತಿಗಳನ್ನು ರಚಿಸಲಾಗಿದೆ ಆದರೆ ಅವು ನಾಗರಿಕರ ಅವಶ್ಯಕ ವಿಷಯಗಳ ಬಗ್ಗೆ ಉದ್ದೇಶಪೂರ್ವಕವಾಗಿ ಪರಿಣಾಮ ಬೀರದಿರುವುದು ಎದ್ದು ಕಾಣುತ್ತಿದೆ. ಬಿಬಿಎಂಪಿಯು ಪ್ರಮುಖ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು, ತನ್ನ ನಾಗರಿಕರ ಆಕಾಂಕ್ಷೆಗಳನ್ನು ಪೂರೈಸಲು, ನಾಗರಿಕ ಸಂಸ್ಥೆಗಳು, ಖಾಸಗಿ ನಗರ ತಜ್ಞರೊಂದಿಗೆ ಸಮಾಲೋಚನೆಗಾಗಿ ಮತ್ತು ಪ್ರಮುಖ ವಿಶೇಷ ತಜ್ಞ ಸಂಸ್ಥೆಗಳೊಂದಿಗೆ ಸಂವಾದದಲ್ಲಿ ತೊಡಗಿಸಿಕೊಳ್ಳಬೇಕು. ಬಿಬಿಎಂಪಿಯ 2017-18ರ ಬಜೆಟ್‌ನಲ್ಲಿ ಘೋಷಿಸಿರುವಂತೆ ಆರೋಗ್ಯ, ಘನ ತ್ಯಾಜ್ಯ ವ್ಯವಸ್ಥಾಪನೆ, ಅರಣ್ಯ ಇತ್ಯಾದಿಗಳ ಕಾಮಗಾರಿ ಮತ್ತು ವೆಚ್ಚಗಳ ಮೇಲೆ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸಬೇಕು.[1]

ಮೂರು ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಪೌರ ಪ್ರದೇಶಗಳಲ್ಲಿ ಅಂದರೆ, ಮಹಾನಗರ ಪಾಲಿಕೆಗಳಲ್ಲಿ (ಅನುಚ್ಛೇದ 243-ಎಸ್) ನ ಪ್ರಕಾರ ವಾರ್ಡ್ ಸಮಿತಿಗಳ ಅಗತ್ಯವಿದೆ ಎಂದು ಶಿಫಾರಸು ಮಾಡಲಾಗಿದೆ.[2]

1. ಪ್ರಕರಣ : 9.12(v), ಪುಟ ಸಂಖ್ಯೆ 156
2. ಪ್ರಕರಣ : 12.3.11, ಪುಟ ಸಂಖ್ಯೆ 185




# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಸಿಎಜಿ) ವರದಿಯ ಟಿಪ್ಪಣಿಗಳು


- ಬಿಬಿಎಮ್‌ಪಿ ಹೊರತುಪಡಿಸಿ ಯಾವುದೇ ಮಹಾನಗರ ಪಾಲಿಕೆಗಳಲ್ಲಿ ವಾರ್ಡ್ ಸಮಿತಿಗಳನ್ನು ರಚಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸ್ಥಳೀಯ ಆಡಳಿತದಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಸುಗಮಗೊಳಿಸುವ ಉದ್ದೇಶವನ್ನು ಇದು ಸೋಲಿಸಿತು. ಸಮುದಾಯದ ಭಾಗವಹಿಸುವಿಕೆಯ ಅನುಪಸ್ಥಿತಿಯು ಅಭಿವೃದ್ಧಿ ಕಾರ್ಯಗಳ ಆದ್ಯತೆ, ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯ ಮೇಲ್ವಿಚಾರಣೆ ಮಾಡದಿರುವುದು, ಸೃಜಿಸಿದ ಸ್ವತ್ತುಗಳ ಬಳಕೆ ಮತ್ತು ನಿರ್ವಹಣೆ ಇತ್ಯಾದಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ[3]

- ವಾರ್ಡ್ ಸಮಿತಿಗಳನ್ನು ಕೆಎಮ್‌ಸಿ ಅಧಿನಿಯಮದ ಅನ್ವಯ ರಚಿಸಬೇಕು ಮತ್ತು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಪೋಷಿಸಿ ಪ್ರೋತ್ಸಾಹಿಸಬೇಕಾಗಿದೆ. ಇದರಿಂದ ನಾಗರೀಕರ ಆದ್ಯತೆಗಳು ನಗರ ಸ್ಥಳೀಯ ಸಂಸ್ಥೆಗಳ ನಿರ್ಧಾರಗಳಿಗೆ ಕಾರಣವಾಗುತ್ತವೆ[4]

- ವಿಕೇಂದ್ರೀಕರಣವನ್ನು ಸಾಧಿಸುವ ದೃಷ್ಟಿಯನ್ನು ಯಥಾವತ್ತಾದ ರೂಪಕ್ಕೆ ಪರಿವರ್ತಿಸಲು ರಾಜ್ಯ ಸರ್ಕಾರ ನಿರ್ಣಾಯಕ ಕ್ರಮವನ್ನು ತೆಗೆದುಕೊಳ್ಳುವ ಅಗತ್ಯವಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ನಿಯೋಜಿಸಲಾದ ಪ್ರಕಾರ್ಯಗಳಿಗೆ ಸಂಬಂಧಪಟ್ಟಂತೆ ಅವುಗಳು ಅಗತ್ಯವಿರುವಷ್ಟು ಸ್ವಾಯತ್ತತೆಯನ್ನು ಅನುಭವಿಸುವುದನ್ನು ಖಚಿತ ಪಡಿಸಿಕೊಳ್ಳುವ ಕ್ರಮಗಳನ್ನು ತೆಗೆದು ಕೊಳ್ಳಬೇಕಾಗಿದೆ[5]

- ರಾಜ್ಯ ಸರ್ಕಾರವು ಗಡಿ ಗುರುತಿಸುವ ಪ್ರಕ್ರಿಯೆಯನ್ನು ಪದೇ ಪದೇ ವಿಳಂಬ ಮಾಡುತ್ತಿರುವುದರಿಂದ, ಸಮಯಕ್ಕೆ ಸರಿಯಾಗಿ ಚುನಾವಣೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಗಡಿ ಗುರುತಿಸುವ ಕೆಲಸವನ್ನು ರಾಜ್ಯ ಚುನಾವಣಾ ಆಯೋಗಕ್ಕೆ ವಹಿಸಬೇಕು[6]

3. ಪ್ರಕರಣ : 4.2.3, ಪುಟ ಸಂಖ್ಯೆ 21
4. ಪ್ರಕರಣ 4.2.3, ಪುಟ ಸಂಖ್ಯೆ 21
5. ಪ್ರಕರಣ : ಲೆಕ್ಕಪರಿಶೋಧನೆಯು ಏನನ್ನು ಶಿಫಾರಸು ಮಾಡಿತು ? , ಪುಟ ಸಂಖ್ಯೆ viii
6. ಪ್ರಕರಣ : ಲೆಕ್ಕಪರಿಶೋಧನೆಯು ಏನನ್ನು ಶಿಫಾರಸು ಮಾಡಿತು ? , ಪುಟ ಸಂಖ್ಯೆ viii


GOVERNMENT OF KARNATAKA

KARNATAKA ADMINISTRATIVE REFORMS COMMISSION-2

THIRD REPORT OF THE KARNATAKA ADMINISTRATIVE REFORMS COMMISSION-2

JANUARY-2022

# ಕರ್ನಾಟಕ ಆಡಳಿತ ಸುಧಾರಣಾ ಆಯೋಗ-ದ್ವಿತೀಯದ ಟಿಪ್ಪಣಿಗಳು

ವಾರ್ಡ್ ಸಮಿತಿಗಳು ನಗರ ಆಡಳಿತದ ಅಡಿಪಾಯಗಳಾಗಿವೆ. ಅವುಗಳು 2020 ರಲ್ಲಿ ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಹಾಗು ಅದರ ನಂತರದ ಪರಿಣಾಮಕಾರಿ ಮತ್ತು ಶ್ಲಾಘನೀಯ ಕಾರ್ಯವನ್ನು ನಿರ್ವಹಿಸಿವೆ. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಾರ್ಡ್ ಸಮಿತಿಗಳನ್ನು ಕಾನೂನುಬದ್ಧವಾಗಿ ರಚಿಸಲಾಗಿಲ್ಲ. ಒಂದು ನಿರ್ದಿಷ್ಟ ಕಾಲಮಿತಿಯೊಳಗೆ ವಾರ್ಡ್ ಸಮಿತಿಗಳನ್ನು ರಚಿಸಲು ಸರ್ಕಾರವು ನಿರ್ದೇಶನಗಳನ್ನು ನೀಡದಿರುವುದು ಕಂಡುಬಂದಿದೆ. ವಾರ್ಡ್ ಸಮಿತಿಗಳ ರಚನೆ ಬಗ್ಗೆ ನಗರ ಸ್ಥಳೀಯ ಸಂಸ್ಥೆಗಳು ಮತ್ತು ನಿವಾಸಿಗಳಿಗೆ ಮಾರ್ಗದರ್ಶನ ನೀಡುವುದು ಅವಶ್ಯಕ. ಈ ನಿಬಂಧನೆಯನ್ನು ಅನುಷ್ಠಾನಗೊಳಿಸುವಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಸಹಕಾರ, ಮಾರ್ಗದರ್ಶಕರಾಗಿ ಸರ್ಕಾರೇತರ ಸಂಸ್ಥೆಗಳು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ ಮತ್ತು ಸ್ಥಳೀಯ ಕಾಲೇಜುಗಳ ಸಮಾಜ ವಿಜ್ಞಾನ/ರಾಜಕೀಯ ವಿಜ್ಞಾನ ಅಧ್ಯಾಪಕರನ್ನು ಸರ್ಕಾರ ತೊಡಗಿಸಿಕೊಳ್ಳಬೇಕು.[7]

ವಾರ್ಡ್ ಸಮಿತಿಗಳು ಮತ್ತು ಏರಿಯಾ ಸಭಾಗಳ ಕಾರ್ಯನಿರ್ವಹಣೆಯನ್ನು ಸಕ್ರಿಯಗೊಳಿಸಲು ಬಿಬಿಎಂಪಿ ಕಾಯ್ದೆ ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ (ಕೆಎಂಸಿ) ಕಾಯ್ದೆಯಡಿ ಹೊರಡಿಸಲಾದ ನಿಯಮಗಳಿಗೆ ಅನುಗುಣವಾಗಿ, ನಗರ ಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ವಾರ್ಡ್ ಸಮಿತಿಗಳು ಮತ್ತು ಏರಿಯಾ ಸಭಾಗಳ ಕಾರ್ಯನಿರ್ವಹಣೆಯನ್ನು ಸಕ್ರಿಯಗೊಳಿಸಲು ಕರ್ನಾಟಕ ಪೌರಸಂಸ್ಥೆಗಳ (ಕೆಎಂ) ಕಾಯ್ದೆಯಡಿ ಅನುಗುಣವಾದ ನಿಯಮಗಳನ್ನು ಸೂಚಿಸಲು ಶಿಫಾರಸು ಮಾಡಲಾಗಿದೆ.[8]

7. ಪ್ರಕರಣ : 4.3(1), ಪುಟ ಸಂಖ್ಯೆ 90, KARC-2 ರ ಮೂರನೇ ವರದಿ, ಜನವರಿ 2022

8. ಪ್ರಕರಣ : 4.8(62), ಪುಟ ಸಂಖ್ಯೆ 102, KARC-2 ರ ಮೂರನೇ ವರದಿ, ಜನವರಿ 2022

ಕಟ್ಟಡ ಯೋಜನೆ ಉಲ್ಲಂಘನೆಯನ್ನು ನಿಯಂತ್ರಿಸುವಲ್ಲಿ ನಾಗರಿಕರು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಮತ್ತು ಏರಿಯಾ ಸಭಾಗಳು ಸಕ್ರಿಯವಾಗಿ ತೊಡಗಿಸಿಕೊಳ್ಳಬಹುದು. ವಾರ್ಡ್ ಸಮಿತಿ, ಏರಿಯಾ ಸಭಾ ಮತ್ತು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಉಲ್ಲಂಘನೆಗಳನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ಕಾರ್ಯಕಾರಿ ಅಧಿಕಾರಿ/ಆಯುಕ್ತರಿಗೆ ವರದಿ ಮಾಡಲು ವಿನಂತಿಸಬಹುದು. ಉಲ್ಲಂಘನೆಗಳನ್ನು ವರದಿ ಮಾಡುವಾಗ ಅನಾಮಧೇಯತೆಯನ್ನು ಕಾಪಾಡುವ ದೃಷ್ಟಿಯಿಂದ, ನಗರ ಸ್ಥಳೀಯ ಸಂಸ್ಥೆಯಲ್ಲಿನ ಸಂಬಂಧಿತ ಪ್ರಾಧಿಕಾರಕ್ಕೆ ದೂರುಗಳು/ವರದಿಗಳನ್ನು ಸಲ್ಲಿಸಲು ಬಿಬಿಎಂಪಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ವೆಬ್ ಮತ್ತು ಮೊಬೈಲ್ ಪೋರ್ಟಲ್‌ಗಳಲ್ಲಿ ಆನ್‌ಲೈನ್ ವರದಿ ಮಾಡುವ ವ್ಯವಸ್ಥೆ ಇರಬೇಕು.[9]

KTCP ಕಾಯಿದೆಯ ಪ್ರಕರಣ 9 ಮತ್ತು 10 ರ ಪ್ರಕಾರ ಮಾಸ್ಟರ್ ಪ್ಲಾನ್ ಅನ್ನು ಸಿದ್ಧಪಡಿಸುವಲ್ಲಿ ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳ ಭಾಗವಹಿಸುವಿಕೆಯನ್ನು ಕಡ್ಡಾಯಗೊಳಿಸಲಾಗಿಲ್ಲ. ಈ ಉದ್ದೇಶಕ್ಕಾಗಿ, 1961ರ KTCP ಕಾಯಿದೆಗೆ ತಿದ್ದುಪಡಿ ತಂದು, ವಾರ್ಡ್ ಸಮಿತಿಗಳು ಮತ್ತು ಏರಿಯಾ ಸಭಾಗಳು ಮಾಸ್ಟರ್ ಪ್ಲಾನ್ ತಯಾರಿಕೆಯಲ್ಲಿ ಮತ್ತು ಕರಡು ಯೋಜನೆಯಲ್ಲಿ ಸಲಹೆಗಳನ್ನು ನೀಡುವಲ್ಲಿ ಭಾಗವಹಿಸುವುದನ್ನು ಕಡ್ಡಾಯಗೊಳಿಸಬಹುದು.[10]

ಬಿಬಿಎಂಪಿ ಕಾಯಿದೆಯಡಿ, ವಾರ್ಷಿಕ ವಾರ್ಡ್ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು ವಾರ್ಡ್ ಸಮಿತಿಗಳ ಕಾರ್ಯಗಳಲ್ಲಿ ಒಂದಾಗಿದೆ. ಈ ಯೋಜನೆಯನ್ನು ಸಿದ್ಧಪಡಿಸುವಲ್ಲಿ ವಾರ್ಡ್ ಸಮಿತಿಗಳಿಗೆ ಮಾರ್ಗದರ್ಶನ ನೀಡಲು, ಅದನ್ನು ಸಾಂಸ್ಥಿಕಗೊಳಿಸಲು ಮತ್ತು ನಿರಂತರತೆಯನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಮಾರ್ಗಸೂಚಿಗಳನ್ನು ನೀಡಬಹುದು. ಬಿಬಿಎಂಪಿಯು 2021-22ರಲ್ಲಿ ಪ್ರತಿ ವಾರ್ಡ್ ಸಮಿತಿಗೆ 60 ಲಕ್ಷ ರೂ ಮೀಸಲಿರಿಸಿತ್ತು ಇದೊಂದು ಶ್ಲಾಘನೀಯ ಕ್ರಮವಾಗಿದೆ. ಕರ್ನಾಟಕ ಮಹಾನಗರ ಪಾಲಿಕೆಗಳ (ಕೆಎಂಸಿ) ಕಾಯ್ದೆಯಡಿ, 1976 ಮತ್ತು ಕರ್ನಾಟಕ ಪೌರಸಂಸ್ಥೆಗಳ (ಕೆಎಂ) ಕಾಯ್ದೆಯಡಿ, 1964 ರ ಅಡಿಯಲ್ಲಿ ಇತರ ನಗರ ಸ್ಥಳೀಯ ಸಂಸ್ಥೆಗಳಿಗೆ ಇದೇ ರೀತಿಯ ಮಾರ್ಗಸೂಚಿಗಳನ್ನು ನೀಡಬಹುದು ಮತ್ತು ಅನ್ಟೈಡ್ ನಿಧಿಗಳನ್ನು ಒದಗಿಸಬಹುದು.[11]

9. ಪ್ರಕರಣ : 4.1(22), ಪುಟ ಸಂಖ್ಯೆ 86, KARC-2 ರ ಮೂರನೇ ವರದಿ, ಜನವರಿ 2022

10. ಪ್ರಕರಣ : 4.7(55), ಪುಟ ಸಂಖ್ಯೆ 101, KARC-2 ರ ಮೂರನೇ ವರದಿ, ಜನವರಿ 2022

11. ಪ್ರಕರಣ : 4.8(63), ಪುಟ ಸಂಖ್ಯೆ 101, KARC-2 ರ ಮೂರನೇ ವರದಿ, ಜನವರಿ 2022

# ಕರ್ನಾಟಕ ಉಚ್ಚ ನ್ಯಾಯಾಲಯದ ಟಿಪ್ಪಣಿಗಳು

**ಬಿಬಿಎಂಪಿಗೆ** ಸಂಬಂಧಿಸಿದಂತೆ ರಿಟ್ ಅರ್ಜಿ ಸಂಖ್ಯೆ 24739/2012, ದಿನಾಂಕ 04.03.2013 **(ಕವಿತ್ ಶಂಕರ್ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು.)** ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ದೈನಂದಿನ ಆದೇಶಗಳು

**CASE 1:**

ರಸ್ತೆಗಳ ಮೇಲೆ ಕಸವನ್ನು ಚಲ್ಲಿರುವುದು ಜನರು ಸರ್ಕಾರದ ನಿರ್ದೇಶನಗಳನ್ನು ಪಾಲಿಸದಿರುವುದಿಲ್ಲವೆಂದು ಎತ್ತಿ ತೋರಿಸುತ್ತದೆ. ಇದೇ ಉದ್ದೇಶಕ್ಕಾಗಿ ವಾರ್ಡ್ ಸಮಿತಿಗಳನ್ನು ರಚಿಸುವಂತೆ ನ್ಯಾಯಾಲಯ ನಿರ್ದೇಶಿಸಿದೆ. ಎಲ್ಲೆಂದರಲ್ಲಿ ಕಸ ಎಸೆದರೆ ಮತ್ತು ಅದನ್ನು ತೆರವುಗೊಳಿಸದಿದ್ದರೆ, ನಾಗರಿಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಅಥವಾ ಬಿಬಿಎಂಪಿ ಅಧಿಕಾರಿಗಳನ್ನು ಸಂಪರ್ಕಿಸುವ ಬದಲಿಗೆ, ಅದೇ ವಾರ್ಡಿನಲ್ಲಿ ನೆಲೆಸಿರುವ ಪಾಲಿಕೆಯ ಸದಸ್ಯರನ್ನು ಮತ್ತು 10 ವಾರ್ಡ್ ಸಮಿತಿ ಸದಸ್ಯರನ್ನು ಸಂಪರ್ಕಿಸುವುದರ ಮೂಲಕ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಪರಿಹರಿಸಿಕೊಳ್ಳಬಹುದು. ಯಾವುದೇ ಸುಧಾರಣೆಯಾಗದಿದ್ದರೆ ಅಂತಹ ಸಂಧರ್ಭದಲ್ಲಿ ನಾಗರಿಕರು ಈ ನ್ಯಾಯಾಲಯದ ಮುಂದೆ ಪಾಲಿಕೆಯ ಸದಸ್ಯರುಗಳ ಮತ್ತು ವಾರ್ಡ್ ಸಮಿತಿ ಸದಸ್ಯರ ನಿಷ್ಕ್ರಿಯತೆಯ ಮತ್ತು ಇನ್ನೂಳಿದ ವಿವರಗಳೊಂದಿಗೆ ಅರ್ಜಿಯನ್ನು ಸಲ್ಲಿಸಲು ಮುಕ್ತವಾಗಿರುತ್ತಾರೆ, ಮತ್ತು ಇಂತಹ ಸನ್ನಿವೇಶದಲ್ಲಿ ಅವರೆಲ್ಲರನ್ನೂ ಆಲಿಸಿದ ನಂತರ ಈ ನ್ಯಾಯಾಲಯವು ಕಸವನ್ನು ಸ್ವಚ್ಛಗೊಳಿಸುವಂತೆ ನಿರ್ದೇಶನ ಹೊರಡಿಸಿ ಸೂಕ್ತ ಕ್ರಮ ಕೈಗೊಳ್ಳುವ ಸ್ಥಿತಿಯಲ್ಲಿ ಇರುತ್ತದೆ.

**CASE 2:**

**ಮಂಗಳೂರು ಮಹಾನಗರ ಪಾಲಿಕೆಗೆ** ಸಂಬಂಧಿಸಿದಂತೆ ರಿಟ್ ಅರ್ಜಿ ಸಂಖ್ಯೆ 53244/2018 **(ನೈಜೆಲ್ ಅಲ್ಬುಕರ್ಕ್ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು.)** ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ

ಪ್ರಕರಣ 13ಹೆಚ್ ಅಡಿಯಲ್ಲಿ, ಪಾಲಿಕೆಯಲ್ಲಿ ಪ್ರತಿ ವಾರ್ಡ್‌ಗೆ ವಾರ್ಡ್ ಸಮಿತಿ ಇರಬೇಕೆಂಬ ಕಡ್ಡಾಯ ನಿಬಂಧನೆ ಇದೆ. ಪ್ರಕರಣ 13ಹೆಚ್ ರಲ್ಲಿ ವಾರ್ಡ್ ಸಮಿತಿಯ ರಚನೆ ಪ್ರಕ್ರಿಯೆಯು ತಿಳಿಸಲ್ಪಟ್ಟಿದೆ. ಪ್ರಕರಣ 13ಹೆಚ್ ರ ಉಪ-ಪ್ರಕರಣ (2) ರ ಅಂಶ (ಎ) ಪ್ರಕಾರ, ಸಂಬಂಧಪಟ್ಟ ವಾರ್ಡ್ ಅನ್ನು ಪ್ರತಿನಿಧಿಸುವ ಪಾಲಿಕೆಯ ಸದಸ್ಯರು ವಾರ್ಡ್ ಸಮಿತಿಯ ಅಧ್ಯಕ್ಷರಾಗಿರಬೇಕು ಮತ್ತು ಅಂಶ (ಬಿ) ಪ್ರಕಾರ ಹತ್ತು ಇತರ ಸದಸ್ಯರನ್ನು ಪಾಲಿಕೆ ನಾಮನಿರ್ದೇಶನ ಮಾಡಬೇಕು. ಪ್ರಕರಣ 13ಹೆಚ್ ರ ಉಪ-ಪ್ರಕರಣ (2) ಅಂಶ (ಎ) ಮತ್ತು ಅಂಶ (ಬಿ) ಹಾಗು ಉಪ-ಪ್ರಕರಣ (10) ರನ್ನು ಒಟ್ಟಿಗೆ ಓದಿದಾಗ, ವಾರ್ಡ್ ಸಮಿತಿಯ ಅವಧಿಯು ಮಹಾನಗರ ಪಾಲಿಕೆಯ ಪರಿಷತ್ತಿನ ಅವಧಿಯೊಂದಿಗೆ ಮುಕ್ತಾಯಗೊಳ್ಳುತ್ತದೆ ಎಂದು ಸ್ಪಷ್ಟವಾಗುತ್ತದೆ.[12]

ಈ ಕಾಯಿದೆಯ ಪ್ರಕರಣ 13ಜಿ ಅಡಿಯಲ್ಲಿ, ಏರಿಯಾ ಸಭಾಗಳಿಗೆ ಪ್ರಮುಖ ಕಾರ್ಯಗಳು ಮತ್ತು ಕರ್ತವ್ಯಗಳನ್ನು ವಹಿಸಲಾಗಿದೆ. ಪ್ರಕರಣ 13ಐ ಅಡಿಯಲ್ಲಿ, ವಾರ್ಡ್ ಸಮಿತಿಗಳ ಕಡ್ಡಾಯ ಕಾರ್ಯಗಳನ್ನು ತಿಳಿಸಲ್ಪಟ್ಟಿದೆ.[13]

ಪ್ರಕರಣ 13ಸಿ ಮತ್ತು ಪ್ರಕರಣ 13ಎಚ್ ನ ನಿಬಂಧನೆಗಳನ್ನು ಸರಳವಾಗಿ ಓದಿದಾಗ 'ಶಲ್' ಪದದ ಬಳಕೆಯಲ್ಲದೆ, ಏರಿಯಾ ಸಭಗಳಿಗೆ ಮತ್ತು ವಾರ್ಡ್ ಸಮಿತಿಗಳಿಗೆ ಪ್ರಮುಖ ಕಾರ್ಯಗಳು ಮತ್ತು ಕರ್ತವ್ಯಗಳನ್ನು ನಿಯೋಜಿಸಲ್ಪಟ್ಟಿದ್ದು, ಈ ಎರಡು ಪ್ರಕರಣಗಳು ಕಡ್ಡಾಯ ಸ್ವರೂಪ ಹೊಂದಿರುವುದು ನಿಖರವಾಗಿ ಕಂಡುಬರುತ್ತದೆ. ಭಾರತದ ಸಂವಿಧಾನದ ಅನುಚ್ಛೇದ 243ಎಸ್ ವಾರ್ಡ್ ಮಟ್ಟದಲ್ಲಿ ವಾರ್ಡ್ ಸಮಿತಿಗಳನ್ನು ರಚಿಸುವಿಕೆ ಕಡ್ಡಾಯಗೊಳಿಸುತ್ತದೆ. ವಾಸ್ತವವಾಗಿ, ಅನುಚ್ಛೇದ 243ಎಸ್ ನ ಅಂಶ (4) ಸಂಬಂಧಿತ ವಾರ್ಡ್ ಅನ್ನು ಪ್ರತಿನಿಧಿಸುವ ಪಾಲಿಕೆಯ ಸದಸ್ಯರನ್ನು ಸಂಬಂಧಪಟ್ಟ ವಾರ್ಡ್ ಸಮಿತಿಯ ಅಧ್ಯಕ್ಷರನ್ನಾಗಿಸಲು ಅವಕಾಶ ಕಲ್ಪಿಸಿದೆ.[14]

ಪ್ರಕರಣ 13ಬಿ ಅಡಿಯಲ್ಲಿ ಏರಿಯಾ ಸಭೆಯನ್ನು ರಚಿಸುವುದಕ್ಕಾಗಿ, ಪ್ರದೇಶಗಳನ್ನು ನಿರ್ಧರಿಸಲು ರಾಜ್ಯ ಸರ್ಕಾರವು ಅಧಿಕಾರವನ್ನು ಹೊಂದಿದೆ. ಒಂದು ವೇಳೆ ಸರ್ಕಾರ ಈ ಅಧಿಕಾರವನ್ನು ಚಲಾಯಿಸದಿದ್ದರೆ ಕೂಡಲೇ ಈ ಅಧಿಕಾರವನ್ನು ಚಲಾಯಿಸಬೇಕು. ಏಕೆಂದರೆ ಪರಿಷತ್ ಚುನಾವಣೆಯ ಆದ ನಂತರ ಏರಿಯಾ ಸಭೆಗಳನ್ನು ಸುಲಭವಾಗಿ ರಚಿಸಬಹುದು.[15]

**CASE 3:**

ಮೈಸೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಂಖ್ಯೆ 3506/2021 (ಮಾಳವಿಕಾ ಗುಬ್ಬಿವಾಣಿ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು.) ರಲ್ಲಿ ಬೆಂಗಳೂರಿನಲ್ಲಿರುವ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ

ವಾರ್ಡ್ ಸಮಿತಿಗಳನ್ನು ರಚಿಸುವುದು ಭಾರತದ ಸಂವಿಧಾನದ 243ಎಸ್ ನ ಆದೇಶವಾಗಿದೆ ಎಂಬುದನ್ನು ನಾವು ಇಲ್ಲಿ ಗಮನಿಸಬಹುದು. ಭಾರತದ ಸಂವಿಧಾನದ 243S ವಿಧಿಯ ನಿಬಂಧನೆಗಳನ್ನು ಜಾರಿಗೆ ತರಲು, ಸೆಕ್ಷನ್ 13ಹೆಚ್ ಅನ್ನು ಶಾಸನ ಪುಸ್ತಕದಲ್ಲಿ ಸೇರಿಸಲಾಗಿದೆ. 1976 ರ ಈ ಕಾಯಿದೆಯ ಪ್ರಕರಣ 13ಹೆಚ್ ನ ಉಪ-ಪ್ರಕರಣ (1) ರ ಪ್ರಕಾರ, ಪಾಲಿಕೆಯಲ್ಲಿ ಪ್ರತಿ ವಾರ್ಡ್‌ಗೆ ಒಂದು ವಾರ್ಡ್ ಸಮಿತಿ ಇರಬೇಕು. ಈ ಸಂದರ್ಭದಲ್ಲಿ, 1976 ರ ಸದರಿ ಕಾಯಿದೆಯ ಪ್ರಕರಣ 21ರ ಪ್ರಕಾರ ವಾರ್ಡ್‌ಗಳ ನಿರ್ಣಯವನ್ನು ಮಾಡಲಾಗಿದೆ ಎಂಬುದಕ್ಕೆ ಯಾವುದೇ ವಿವಾದವಿಲ್ಲ. 1976 ರ ಸದರಿ ಕಾಯಿದೆಯ ಪ್ರಕರಣ 13ಹೆಚ್ ನ. 1976 ರ ಸದರಿ ಕಾಯಿದೆಯ ಪ್ರಕರಣ 13H ನ ಉಪ-ಪ್ರಕರಣ (2) ರ (ಬಿ) ರ ಅಡಿಯಲ್ಲಿ, ಹತ್ತು ಸದಸ್ಯರನ್ನು ನಿಗಮವು ನಾಮನಿರ್ದೇಶನ ಮಾಡುವ ಅಗತ್ಯವಿದೆ. 1976 ರ ಸದರಿ ಕಾಯಿದೆಯ ಉಪ-ಪ್ರಕರಣ (4) ಪ್ರಕರಣ 13ಹೆಚ್ ಅಡಿಯಲ್ಲಿ, ಆಯುಕ್ತರು ಪ್ರತಿ ವಾರ್ಡ್ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲು ಸೂಕ್ತ ಶ್ರೇಣಿಯ ಅಧಿಕಾರಿಯನ್ನು ನೇಮಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.[16]

ಭಾರತದ ಸಂವಿಧಾನದ ಅನುಚ್ಛೇದ 243ಎಸ್ ಅಡಿಯಲ್ಲಿ ಸಾಂವಿಧಾನಿಕ ಆದೇಶವನ್ನು ಮತ್ತು 1976 ರ ಸದರಿ ಕಾಯಿದೆಯ ಪ್ರಕರಣ 13ಹೆಚ್ ನ ನಿಬಂಧನೆಗಳನ್ನು ಪರಿಗಣಿಸಿ, ನಿಗಮವು ಉಪ-ಪ್ರಕರಣ (2) ರ ಷರತ್ತು (ಬಿ) ನಲ್ಲಿ ಒದಗಿಸಿದಂತೆ ಹತ್ತು ಸದಸ್ಯರನ್ನು ನಾಮನಿರ್ದೇಶನ ಮಾಡುವ ನಿರ್ಧಾರವನ್ನು ಮುಂದೂಡಲಾಗುವುದಿಲ್ಲ. 1976 ರ ಈ ಕಾಯಿದೆಯ ಪ್ರಕರಣ 13ಹೆಚ್. ಪ್ರತಿಯೊಂದು ವಾರ್ಡ್ ಸಮಿತಿಗಳಿಗೆ ಕಾರ್ಯದರ್ಶಿಗಳನ್ನು ನೇಮಿಸುವ ಮೂಲಕ ಆಯುಕ್ತರು 1976 ರ ಸದರಿ ಕಾಯಿದೆಯ 13ಹೆಚ್ ಅಡಿಯಲ್ಲಿ ಏಕೆ ಅಧಿಕಾರವನ್ನು ಚಲಾಯಿಸಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಲು ನಾವು ವಿಫಲರಾಗಿದ್ದೇವೆ.[17]

---

12 . ಪ್ರಕರಣ 4, ಪುಟ ಸಂಖ್ಯೆ 4
13. ಪ್ರಕರಣ 5, ಪುಟ ಸಂಖ್ಯೆ 4
14. ಪ್ರಕರಣ 7, ಪುಟ ಸಂಖ್ಯೆ 5
15. ಪ್ರಕರಣ 6, ಪುಟ ಸಂಖ್ಯೆ 5
16. ಪ್ರಕರಣ 12, ಪುಟ ಸಂಖ್ಯೆ 10
17 ಪ್ರಕರಣ 13, ಪುಟ ಸಂಖ್ಯೆ 10

1976 ರ ಈ ಕಾಯಿದೆಯ ಪ್ರಕರಣ 13ಐ ಅಡಿಯಲ್ಲಿ, ವಾರ್ಡ್ ಸಮಿತಿಗಳ ಕಾರ್ಯಗಳನ್ನು ನಿಗದಿಪಡಿಸಲಾಗಿದೆ. ಒಂದು ಪ್ರಮುಖ ಕಾರ್ಯವೆಂದರೆ ಹಣ ಹಂಚಿಕೆಗಾಗಿ ವಾರ್ಡ್ ಅಭಿವೃದ್ಧಿ ಯೋಜನೆಯನ್ನು ನಿಗಮಕ್ಕೆ ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು. ವಾರ್ಡ್ ಅಭಿವೃದ್ಧಿ ಯೋಜನೆಯಡಿ ಮಂಜೂರು ಮಾಡಿದ ಹಣವನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು ವಾರ್ಡ್ ಸಮಿತಿಗಳ ಕರ್ತವ್ಯವಾಗಿದೆ. ಪಾಲಿಕೆಯ ಕಾರ್ಯಕ್ರಮಗಳು ಮತ್ತು ಯೋಜನೆಗಳ ಅನುಷ್ಠಾನ, ನೀರು ಸರಬರಾಜು ನಿರ್ವಹಣೆ, ಒಳಚರಂಡಿ ವ್ಯವಸ್ಥೆಯ ನಿರ್ವಹಣೆ ಮತ್ತು ವಾರ್ಡ್‌ನಲ್ಲಿ ಘನತ್ಯಾಜ್ಯ ನಿರ್ವಹಣೆ ಮತ್ತು ನೈರ್ಮಲ್ಯ ಕಾರ್ಯಗಳ ರಚನೆಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿಗಳಿಗೆ ಹಲವಾರು ಕರ್ತವ್ಯಗಳನ್ನು ನಿಗದಿಪಡಿಸಲಾಗಿದೆ. ವಾಸ್ತವವಾಗಿ, ಉದ್ಯಾನವನಗಳು/ತೆರೆದ ಸ್ಥಳಗಳ ನಿರ್ವಹಣೆಯನ್ನು ಖಾತ್ರಿಪಡಿಸುವ ಅತ್ಯಂತ ಪ್ರಮುಖ ಕರ್ತವ್ಯವನ್ನು ವಾರ್ಡ್ ಸಮಿತಿಗಳಿಗೆ ವಹಿಸಲಾಗಿದೆ. ಅರಣ್ಯೀಕರಣ ಮತ್ತು ಮಳೆ ನೀರು ಕೊಯ್ಲು ಯೋಜನೆಗಳ ಅನುಷ್ಠಾನವನ್ನು ಖಚಿತಪಡಿಸುವುದು ವಾರ್ಡ್ ಸಮಿತಿಗಳ ಜವಾಬ್ದಾರಿಯಾಗಿದೆ. ವಾರ್ಡ್ ಸಮಿತಿಗಳನ್ನು ರಚಿಸದೆ ಇರುವ ಮೂಲಕ, ಭಾರತದ ಸಂವಿಧಾನದ 243 ಎಸ್ ಅಡಿಯಲ್ಲಿ ಸಾಂವಿಧಾನಿಕ ಆದೇಶದ ಸಂಪೂರ್ಣ ಉಲ್ಲಂಘನೆಯಾಗಿದೆ.[18]

**1976 ರ ಸದರಿ ಕಾಯಿದೆಯ ಪ್ರಕರಣ13ಜೆ ಹೀಗೆ ಹೇಳುತ್ತದೆ**

13ಜೆ. ಬೈಲಾ - ಈ ಅಧ್ಯಾಯವನ್ನು ಅನ್ವಯಿಸುವ ಪ್ರತಿಯೊಂದು ನಿಗಮವು ಬರುವ ದಿನಾಂಕದಿಂದ ಆರು ತಿಂಗಳೊಳಗೆ ವ್ಯವಹಾರದ ವಹಿವಾಟು ಮತ್ತು ಏರಿಯಾ ಸಭೆಗಳು ಮತ್ತು ವಾರ್ಡ್ ಸಮಿತಿಗಳ ಕಾರ್ಯನಿರ್ವಹಣೆಯನ್ನು ನಿಯಂತ್ರಿಸುವ ಹಣಕಾಸು ಮತ್ತು ಲೆಕ್ಕಪತ್ರ ಕಾರ್ಯವಿಧಾನಗಳಿಗಾಗಿ ಉಪ-ಕಾನೂನುಗಳನ್ನು ಸೂಚಿಸಿ ಜಾರಿಗೆ ತರಬೇಕು.

ಪಾಲಿಕೆಯು ಮೇಲೆ ಹೇಳಿದಂತೆ ಬೈಲಾಗಳನ್ನು ಮಾಡದ ಹೊರತು, ಏರಿಯಾ ಸಭೆಗಳು ಮತ್ತು ವಾರ್ಡ್ ಸಮಿತಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲ. ವಾಸ್ತವವಾಗಿ, ಬೈಲಾಗಳ ಅನುಪಸ್ಥಿತಿಯಲ್ಲಿ, ಏರಿಯಾ ಸಭೆಗಳು ಮತ್ತು ವಾರ್ಡ್ ಸಮಿತಿಗಳಿಗೆ ಸಂಬಂಧಿಸಿದ ನಿಬಂಧನೆಗಳನ್ನು ಕಾರ್ಯಗತಗೊಳಿಸಲಾಗುವುದಿಲ್ಲ. ಆದ್ದರಿಂದ, ಬೈಲಾಗಳನ್ನು ಸೂಚಿಸುವ ಬಾಧ್ಯತೆಯನ್ನು ಅನುಸರಿಸಲು ಮ್ಯಾಂಡಮಸ್‌ನ ರಿಟ್ ಅನ್ನು ಹೊರಡಿಸಬೇಕಾಗುತ್ತದೆ.[19]

18. ಪ್ರಕರಣ 14, ಪುಟ ಸಂಖ್ಯೆ 11
19. ಪ್ರಕರಣ 15, ಪುಟ ಸಂಖ್ಯೆ 12

ಜನಾಗ್ರಹ

ಜನಾಗ್ರಹ ಸೆಂಟರ್ ಫಾರ್ ಸಿಟಿಝೆನ್ಶಿಪ್ ಅಂಡ್ ಡೆಮಾಕ್ರಸಿ
19/4, 3 ನೇ ಮಹಡಿ, ಸ್ಟೈರ್ ಬಾಗ್,
ಜಸ್ಟ್ ಡಯಲ್ ಮುಂಭಾಗ, ಕನ್ನಿಂಗ್ಹ್ಯಾಮ್ ರಸ್ತೆ ಬೆಂಗಳೂರು, - 560052